# 79

# ಸಿದ್ಧನಾಗಿರು

## ಓದುವ ಮನೆಪಾಠ #33

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).

E. ಮಂಗಳವಾರ: "ಪ್ರಶ್ನೆಗಳ ಮಹಾದಿನ" (ಮುಂದುವರೆಯುವದು).

7. ಯೆರೂಸಲೇಮಿನ ನಾಶನ ಹಾಗೂ ಎರಡನೇ ಬರೋಣದ ಕುರಿತ ಚರ್ಚೆ (ಮುಂದುವರೆಯುವದು).

c. ಎರಡನೇ ಬರೋಣದ ಕುರಿತ ಬೋಧನೆ (ಮುಂದುವರೆಯುವದು).

(2) ಬೋಧನೆಗೆ ಸಂಬಂಧ ಪಟ್ಟ ಸಾಮ್ಯಗಳು:

(a) ಹತ್ತು ಜನ ಕನ್ಯೆಯರು (ಮತ್ತಾಯ 25:1-13).

(b) ಹತ್ತು ತಲಾಂತುಗಳು (ಮತ್ತಾಯ 25:14-30).

(c) ಕುರಿಗಳ ಹಾಗೂ ಆಡುಗಳು (ಮತ್ತಾಯ 25:31-46).

F. ಬುಧವಾರ: ಬಿರುಗಾಳಿಯನ್ನು ಶಾಂತಿ ಪಡಿಸಿದ್ದು.

1. ಯೇಸುವಿನ: ಸಿದ್ಧತೆ (ಮತ್ತಾಯ 26:1, 2; ಯೋಹಾನ 13:1).

2. ಹಿರಿಸಭೆಯವರು: ಅವರ ಯೋಜನೆ (ಮತ್ತಾಯ 26:3-5; ಮಾರ್ಕ 14:1, 2; ಲೂಕ 22:1, 2).

3. ಯೂದ: ಹಿಡುಕೊಟ್ಟ ಕಾರ್ಯ (ಮತ್ತಾಯ 26:14-16; ಮಾರ್ಕ 14:10, 11; ಲೂಕ 22:3-6).

G. ಗುರುವಾರ: ಪಸ್ಕದ ಸಿದ್ಧತೆ (ಮತ್ತಾಯ 26:17-19; ಮಾರ್ಕ 14:12-16; ಲೂಕ 22:7-13).

H. ಶುಕ್ರವಾರ: ಯೇಸುವಿನ ಮರಣದ ದಿನ.

1. ಕಡೇಯ ಭೋಜನ.[1]

a. ಪಸ್ಕದ ಆಚರಣೆ (ಮತ್ತಾಯ 26:20; ಮಾರ್ಕ 14:17, 18; ಲೂಕ 22:14-18).

b. ವಿವಾದದ ತಿರಸ್ಕತ (ಲೂಕ 22:24-30).

## ಪೀಠಿಕೆ

ನಮ್ಮಲ್ಲಿ ಅನೇಕರು ಸಿದ್ಧತೆಯ ಮಹತ್ವ ಮುಂದಿನ ಸಮಯಕ್ಕಾಗಿ ನಾವು ಮಾಡಬೇಕಾದ ಸಿದ್ಧತೆಯ ಮಹತ್ವವನ್ನು ಅರಿತುಕೊಂಡಿದ್ದೇವೆ. ಕೊಡಲ್ಪಟ್ಟ ಕಾರ್ಯವು ದೊಡ್ಡದಿರಲಿ ಅಥವಾ ಸಣ್ಣದಾಗಿಲಿ. ಉದ್ದೇಶವು ಮೆಚ್ಚುವಂಥದ್ದು ಅಥವಾ ಪ್ರಶ್ನಾತಕವಾದದ್ದೂ[2] ಕೂಡಾ ಆಗಿದ್ದರೂ ಸಿದ್ಧಪಡಿಸುವುದಕ್ಕೆ ಸಹಾಯಕವಾದದ್ದಾಗಿದೆ. ಅನೇಕರು "ನಾಳಿನ ಬೇಕುಗಳಿಗೋಸ್ಕರ ಇಂದೇ ಸಿದ್ಧಮಾಡುವದು [ಜಾಣತನ] ಎಂಬ ಈಸೋಫನ ನೀತಿ ಕಥೆಯೆ ಇರುವೆ ಮತ್ತು ಮಿಡತೆಯ ಕಥೆಯನ್ನು ಒಪ್ಪುವವರಾಗಿದ್ದಾರೆ."[3] ಬೈಬಲ್, ಸಿದ್ಧತೆಗಳ ಬಗೆಗೆ ಹೆಚ್ಚಾಗಿ ಹೇಳುವುದಾಗಿದೆ: ನೋಹನು ನಾವೆಯವನ್ನು ಸಿದ್ಧಪಡಿಸಿದನು (ಇಬ್ರಿಯ 11:7); ಸ್ನಾನಿಕನಾದ ಯೋಹಾನನು ಕ್ರಿಸ್ತನಿಗಾಗಿ ಮಾರ್ಗವನ್ನು ಸಿದ್ಧಪಡಿಸಿದನು (ಯೆಶಾಯ 40:3; ಮಲಾಕಿ 3:1; ಮತ್ತಾಯ 3:3); ಯೇಸು ನಮಗಾಗಿ ಸ್ಥಳವನ್ನು ಸಿದ್ಧಪಡಿಸಿದನು (ಯೋಹಾನ 14:1, 2; ನೋಡಿರಿ

ಮತ್ತಾಯ 25:34; ಇಬ್ರಿಯ 11:16).

ನಮ್ಮ ಈಗಿನ ಅಧ್ಯಯನವು ಬದಲಾವಣೆಯ ಪಾಠವು ಮಂಗಳವಾರವನ್ನು ಮುಗಿಸುವದರಿಂದ ಶುಕ್ರವಾರದ ಆರಂಭಕ್ಕೆ ಕ್ರಿಸ್ತನು ಮರಣಿಸಿದ ಆ ದಿನಕ್ಕೆ ನಮ್ಮನ್ನು ಕರೆದೊಯ್ಯುವುದಾಗಿದೆ. ಈ ಅಧ್ಯಯನ ಮೂಲಕ ಸಾಗುತ್ತಿದ್ದಂತೆ ಸಿದ್ಧರಾಗುವ ಸಿದ್ಧತೆಯ ವಿಷಯವು ನಮ್ಮ ಮುಖ್ಯಪ್ರಸ್ತಾಪವಾಗಿದೆ.

## ಯೇಸು ಕ್ರಿಸ್ತನ ಎರಡನೆಯ ಬರೋಣಕ್ಕಾಗಿ ಸಿದ್ಧತೆ[4] (ಮತ್ತಾಯ 25:1-46)

ಹಿಂದಿನ ಪಾಠದಲ್ಲಿ, ಮತ್ತಾಯ 24:36ರಲ್ಲಿ, ಯೇಸು ತನ್ನ ಎರಡನೆಯ ಬರೋಣದ ಬಗೆಗೆ ಮತ್ತು ಕಾಲದ ಅಂತ್ಯದ ಬಗೆಗೆ ಶಿಷ್ಯರ ಪ್ರಶ್ನೆಗೆ ಉತ್ತರಿಸಲು ಆರಂಭಿಸಿದನು ಎಂದು ನಮಗೆ ಸೂಚಿಸಲ್ಪಟ್ಟಿದೆ (24:3). ಆತನ ಮರು ಬರೋಣದ ಸಮಯದ ಬಗ್ಗೆ ಯಾರೋಬ್ಬರೂ ತಿಳಿದಿಲ್ಲ (24:36-41) ಮತ್ತು ಆತನ ಹಿಂಬಾಲಕರು ಅದಕ್ಕಾಗಿ ಯಾವಾಗಲೂ ಸಿದ್ಧರಾಗಿರ ಬೇಕು ಎಂದು ಆತನು ಉತ್ತರದಲ್ಲಿ ಒತ್ತಿಹೇಳಿದನು (25:42-51). ಸಿದ್ಧರಾ ಗುವುದಕ್ಕಾಗಿ ಒತ್ತಿ ಹೇಳುವದು ಮತ್ತಾಯ ಅಧ್ಯಾಯ 25ರ ಉದ್ದಕ್ಕೂ ಮುಂದುವರೆದಿದೆ.

### ಹತ್ತು ಜನ ಕನ್ನಿಕೆಯರು (ವಚನಗಳು 1-13)

ಈ ಅಧ್ಯಾಯವು ಹತ್ತು ಜನ ಕನ್ನಿಕೆಯರಿಂದ ಆರಂಭವಾಗುತ್ತದೆ.[5] ಕನ್ನಿಕೆಯರು ಮದಲಿಂಗನಿಗಾಗಿ ಕಾಯುತ್ತಿದ್ದರು (ವಚನ 1).[6] ಆತನು ಅಲ್ಲಿದೆ ಬಂದಾಗ, ಅಲ್ಲಿ ಹಬ್ಬವು, ಮದುವೆಯ ಆಚರಣೆಯು ಆಚರಿಸಲ್ಪಡುತಿತ್ತು. ಸ್ವಾಗತ ಸಮಿತಿಯ ಭಾಗದಂತೆ ಸ್ತ್ರೀಯರು ತಮ್ಮ ಹಣತೆಯಲ್ಲಿ[7] ದೀಪವನ್ನು ಹಿಡಿದುಲಿಂಗನ ಹಾದಿಯಲ್ಲಿ ನಿಲ್ಲಬೇಕಿತ್ತು.

ಅವರು ಪ್ರತೀಕ್ಷೆಮಾಡುತ್ತಿರುವಾಗ ಮದಲಿಂಗನು ಮರಳಲಿಲ್ಲ. ಇದರ ಪರಿಣಾಮ ವಾಗಿ ಅವರ ಕೈಯಲ್ಲಿನ ಪಣತಿಗಳು ಎಣ್ಣೆಯಿಲ್ಲದೆ ಕಳೆಗುಂದತೊಡಗಿದವು. ಅವರಲ್ಲಿ "ಬುದ್ಧಿವಂತೆಯರು" (KJV) ಅಥವಾ "ದೂರದೃಷ್ಟಿಯುಳ್ಳವರು" (NASB) ಎಂಬ ಶಿರೋನಾಮೆಯನ್ನು ಹೊಂದಿದ ಐದು ಜನ ಕನ್ನಿರೆಯರು ಹೆಚ್ಚಿನ ಎಣ್ಣೆಯನ್ನು ತಂದಿದ್ದರು (ವಚನ 4). ಇತರ "ಬುದ್ಧಿಹೀನ"ರೆಂದು[8] ಕರೆಯಲ್ಪಡುವ ಐದು ಜನರು ವಿಶೇಷ ಸರಭರಾಜನ್ನು ಹೊಂದಿರಲಿಲ್ಲ, ಆದ್ದರಿಂದ ಅವರು ಹೆಚ್ಚಿನ ಎಣ್ಣೆಯನ್ನು ಕೊಳ್ಳಲು ಹೋರು (ವಚನಗಳು 3, 10). ಅವರು ಹೋದಾಗ, ಮದಲಿಂಗನು ಅಲ್ಲಿಗೆ ಬಂದನು ಮತ್ತು ಅಲ್ಲಿ ಉಪಸ್ಥಿತವಿದ್ದವರು ಆ ಆಚರಣೆಗಾಗಿ ಮನೆಯೊಳಕ್ಕೆ ಹೋದರು. ಬುದ್ಧಿಹೀನ ಕನ್ನಿಕೆಯರು ಮರಳಿದಾಗ, ಅವರು ಆ ಸಡಗರದಿಂದ ತಪ್ಪಿಸಿಕೊಂಡರು.[9]

ಆ ಐದು "ಬುದ್ಧವಂತ" ಕನ್ನಿಕೆಯರು ತಮ್ಮಲ್ಲಿದ್ದ ಎಣ್ಣೆಯನ್ನು ಇತರರೊಡನೆ ಯಾಕೆ ಹಂಚಿಕೊಳ್ಳಲಿಲ್ಲ ಎಂದು ನಾವು ಎಚ್ಚರಿಗೊಳ್ಳಬಹುದು. ಇದಕ್ಕೆ ಉತ್ತರವು ಸಾಮ್ಯದ ಅನ್ವಯದಲ್ಲಿ ಸಿಕ್ಕುತ್ತದೆ: ಮದಲಿಂಗನಾದ ಕ್ರಿಸ್ತನು (ನೋಡಿರಿ ಮತ್ತಾಯ 9:15; ಯೋಹಾನ 3:29), ಮರಳಿದಾಗ, ಅಲ್ಲಿ ಹಂಚಿಕೊಳ್ಳುವ ಸಿದ್ಧತೆಯು ಇರುವುದಿಲ್ಲ. ನಾನು ನಿನಗಾಗಿ ಸಿದ್ಧಮಾಡುವುದಿಲ್ಲ, ಮತ್ತು ನೀನು ನನಗಾಗಿ ಸಿದ್ಧಮಾಡಲಾರಿ, "ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" (ರೋಮಾಪುರ 14:12).

ಯೇಸು ಈ ಸಾಮ್ಯವನ್ನು "ಆದಕಾರಣ ಆ ದಿನವಾದರೂ ಗಳಿಯಾದರೂ ನಿಮಗೆ ಗೊತ್ತಿಲ್ಲವಾದದ್ದರಿಂದ ಎಚ್ಚರವಾಗಿರ್ರಿ" ಎಂದು ಸಮಾರೋಪಿಸಿದನು (ಮತ್ತಾಯ 25:13).

### ತಲಾಂತುಗಳು (ವಚನಗಳು 14-30)

ಹತ್ತು ಜನ ಕನ್ನಿಕೆಯರು ಸಾಮ್ಯದ ಹಿಂದೆಯೇ ತಲಾಂತುಗಳ ಸಾಮ್ಯವು ಇದೆ (ವಚನಗಳು 14-30). ಕನ್ನಿಕೆಯರ ಸಾಮ್ಯವು ಜನರು ಕ್ರಿಸ್ತನ ಮರಳವಿಕೆಗೆ *ಕಾಯುವುದನ್ನು*

ಚಿತ್ರಿಸುವುದಾಗಿದ್ದರೆ, ತಲಾಂತುಗಳ ಸಾಮ್ಯವು ನಾವು ಕಾಯುತ್ತಿರುವಾಗ *ಕೆಲಸವನ್ನು* ಮಾಡುತ್ತಿರಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ತಲಾಂತುಗಳ ಸಾಮ್ಯವು ಯೆರೂಸಲೇಮಿನ ಪ್ರಯಾಣದ ಅಂತ್ಯಕ್ಕೆ ಸಮೀಪದಲ್ಲಿ ಮಾತನಾಡಿದಂತಹ ಹತ್ತು ಮೊಹರಿಗಳ ಸಾಮ್ಯಕ್ಕೆ ಸಮಾನವಾದದ್ದಾಗಿದೆ (ಲೂಕ 19:11-27), ಆದರೆ ಅದರ ಒತ್ತುಕೊಡುವ ವಿಷಯವು ಬೇರೆಯಾಗಿದೆ. ಮೊಹರುಗಳು ಸಾಮ್ಯವು ರಾಜ್ಯದ ಸ್ಥಾಪನೆಯು ತಕ್ಷಣವೇ[10] ಸ್ಥಾಪಿತವಾಗುವದು ಎಂದು ಅಲ್ಲ ಎಂದು ಯೇಸುವಿನ ಕೇಳುಗರಿಗೆ ನೆನಪಿಸುವುದಾಗಿದ್ದರೆ, ತಲಾಂತುಗಳ ಸಾಮ್ಯವು ಕರ್ತನ ನಂಬಿಗಸ್ತ ಸೇವಕನಾಗಿ ಇರುವ ಅವಶ್ಯಕತೆಯನ್ನು ಒತ್ತಿಹೇಳುವುದಾಗಿದೆ.

ತಲಾಂತುಗಳ ಸಾಮ್ಯದಲ್ಲಿ, ಒಬ್ಬ ಯಜಮಾನನು ತನ್ನ ಆಳುಗಳನ್ನು ನಂಬಿ ತನ್ನ ಆಸ್ತಿಯನ್ನು ಅವರಿಗೆ ಒಪ್ಪಿಸಿಕೊಟ್ಟನು:[11] ಒಬ್ಬ ಆಳಿಗೆ ಐದು ತಲಾಂತು, ಒಬ್ಬನಿಗೆ ಎರಡು ತಲಾಂತು ಮತ್ತು ಕೊನೆಯ ಸೇವಕನಿಗೆ ಒಂದು ತಲಾಂತು ಕೊಟ್ಟನು. ನಾವು "ತಲಾಂತು": ಎಂಬುದನ್ನು "ಸಾಮರ್ಥ್ಯ" ಎಂದೂ ಅರ್ಥೈಸುತ್ತೇವೆ, ಆದರೆ ಆ ದಿನಗಳಲ್ಲಿ, ಅದು ಹಣದ ಒಂದು ಅಂಶ - ದೊಡ್ಡಮೊತ್ತದ ಹಣದ ವ್ಯವಹಾರವಾಗಿತ್ತು. ಐದು ತಲಾಂತುಗಳ ಮತ್ತು ಎರಡು ತಲಾಂತುಗಳ ವ್ಯಕ್ತಿಗಳು ತನ್ನ ಒಡೆಯನ ಹಣವನ್ನು ಹೆಚ್ಚು ಹಣಗಳಿಸಲು ಉಪಯೋಗಿಸಿದರು. ಒಂದು ತಲಾಂತನ್ನು ಹೊಂದಿದ ವ್ಯಕ್ತಿಯು, ತನ್ನ ನಂಬಿಕೆಯಿಟ್ಟದ್ದನ್ನು ಕಳಕೊಳ್ಳುವೆನೇನೋ ಎಂಬ ಭಯವುಳ್ಳವನಾಗಿದ್ದು, ಅದನ್ನು ಭೂಮಿಯಲ್ಲಿ ಅಡಗಿಸಿಟ್ಟನು. ಒಡೆಯನು ಮರಳಿದಾಗ, ಮೊದಲ ಇಬ್ಬರು ಸೇವಕರು ಬಹುಮಾನಿಸಲ್ಪಟ್ಟರು ಮೂರನೆಯನು ಶಿಕ್ಷೆಗೆ ಒಳಗಾದನು.

ತಿರುಗಿ ಇದರ ಸಂದೇಶವು ಸಿದ್ಧನಾಗಿರುವುದರ ಅವಶ್ಯಕತೆಯ ಬಗೆಗೆ ಇದ್ದು ಈ ವಿಚಾರವನ್ನು ಹೊಂದಿಕೊಂಡಿದೆ: ಯೇಸುವಿನ ಬರೋಣದಲ್ಲಿ ಸಿದ್ಧನಾಗಿರುವುದರ ಒಂದೇ ಮಾರ್ಗವೆಂದರೆ ಆತನ ಕಾರ್ಯದಲ್ಲಿ ನಿರತರಾಗಿರುವುದೇ ಆಗಿದೆ. ಆತನು ಕೊಡಮಾಡಿದ ವರಗಳನ್ನು ಬಳಸಿಕೊಂಡು ಆತನನ್ನು ಮಹಿಮೆಪಡಿಸಬೇಕು.

## ಕುರಿಗಳು ಮತ್ತು ಆಡುಗಳು (ವಚನಗಳು 31-46)

ಯೇಸು ತನ್ನ ಮರಳುವಿಕೆಯ ಬಗೆಗೆ ಸ್ಫುಟವಾದ ವರ್ಣನೆಯ ಮೂಲಕ ತನ್ನ ಉಪದೇಶ ವನ್ನು ಮುಗಿಸಿದನು. ಯೇಸು ಮರಳಿಬಂದು ಭೌತಿಕವಾಗಿ ರಾಜಕೀಯವಾಗಿ ರಾಜ್ಯವನ್ನು ಕಟ್ಟುತ್ತಾನೆ ಮತ್ತು ಸಾವಿರವರ್ಷಗಳವರೆಗೆ ಈ ಭೂಮಿಯನ್ನು ಆಳುತ್ತಾನೆ ಎಂದು, ಕೆಲವರು ಬೋಧನೆಯನ್ನು ಮಾಡುತ್ತಾರೆ. ಯೇಸು ಹೇಗೋ, ತನ್ನ ಮರಳಿವಿಕೆಯ ನಂತರ ನ್ಯಾಯ ತೀರ್ಪು ತಕ್ಷಣವೇ ಬರುವುದಾಗಿದೆ ಎಂದು ಸೂಚಿಸಿದ್ದಾನೆ (ವಚನಗಳು 31, 32).[12]

ನ್ಯಾಯ ತೀರ್ಪಿನ ದಿನದಲ್ಲಿ, ಕರ್ತನು ಕುರುಬನಂತೆ ಯೇಸುವಿನ ದಿನದಲ್ಲಿ ಕುರಿಗಳನ್ನು ಮತ್ತು ಆಡುಗಳನ್ನು ಬೇರೆ ಮಾಡುವಂತೆ ಜನರನ್ನು ವಿಭಾಗಿಸುವವನಾಗಿದ್ದಾನೆ. ಕುರಿ ಮತ್ತು ಆಡುಗಳು ಮೇವನ್ನು ಒಟ್ಟಿಗೆ ಮೇಯುತ್ತಿದ್ದವು, ಆದರೆ ದಿನದ ಅಂತ್ಯದಲ್ಲಿ ಅವೆರಡನ್ನೂ ಬೇರೆ ಬೇರೆಯಾಗಿ ಇಡುತ್ತಿದ್ದರು. ಕುರುಬನ ಉಪಮೇಗಳ ಕಾರಣದಿಂದ ಕೆಲವರು ಇದನ್ನು "ಕುರಿಗಳ ಮತ್ತು ಆಡುಗಳ ಸಾಮ್ಯ" ಎಂದ ಕರೆಯುತ್ತಾರೆ. ಹೇಗೂ ಇದು "ಕೇವಲ ಒಂದು ಕಥೆಯಾಗಿದೆ" ಎಂಬುದನ್ನು ಅರಿತುಕೊಳ್ಳಿರಿ. ನ್ಯಾಯ ತೀರ್ಪು ನೈಜವಾದದ್ದಾಗಿದೆ ಮತ್ತು ಖಚಿತವಾಗಿದೆ (ಇಬ್ರಿಯ 9:27; ಅಪೊಸ್ತಲರ ಕೃತ್ಯಗಳು 17:31).

ತಲಾಂತುಗಳ ಸಾಮ್ಯವ ಒಡೆಯನಿಗೆ ಸೇವೆ ಮಾಡುವ ಮಹತ್ವವನ್ನು ಸೂಚಿಸುವುದಾಗಿದೆ. ಈ ಪರಿಚ್ಛೇದವು ನಾವು ಸೇವೆ ಮಾಡಬಹುದಾದ ಒಂದು ಮಾರ್ಗವನ್ನು ಕೊಡುವುದಾಗಿದೆ - ನಿರ್ಗತಿಕರಿಗೆ ಸಹಾಯಮಾಡುವ ಮೂಲಕ: ಹಸಿವರಿಗೆ, ಮನೆಯಿಲ್ಲದವರಿಗೆ, ಬಟ್ಟೆಯಿಲ್ಲದವರಿಗೆ,[13] ಅನಾರೋಗ್ಯದಲ್ಲಿರವವರಿಗೆ, ಅನಾರೋಗ್ಯದಲ್ಲಿರುವವರಿಗೆ, ಮತ್ತು

ಸೆರೆಯಲ್ಲಿರುವವರಿಗೆ ಸಹಾಯಿಸುವದು ಆಗಿದೆ. ಜೊತೆ ಶಿಷ್ಯರಿಗೆ ಸಹಾಯಿಸುವುದನ್ನು ಒತ್ತಿಹೇಳುವುದಾಗಿದೆ (ಮತ್ತಾಯ 25:40).[14] ಆದರೆ ಇದರ ಅನ್ವಯವು ಎಲ್ಲ ಜನರಿಗೂ ಮಾಡಲ್ಪಟ್ಟಿದ್ದಾಗಿದೆ (ನೋಡಿರಿ ಗಲಾತ್ಯ 6:10).

ಮತ್ತಾಯ 25ರಲ್ಲಿನ ನ್ಯಾಯತೀರ್ಪಿನ ಆಧಾರದ ಮೇಲೆ ಅದ ನಾವು ಕ್ರಿಯೆಯಲ್ಲಿ ಎಷ್ಟು ಪ್ರೀತಿಯುಳ್ಳವರಾಗಿದ್ದೇವೆ ಎಂಬುದು ಮಹತ್ವ ಹೊರತು ನಮ್ಮ ಒಳ್ಳೆಯ ಬೋಧನೆಗಳಲ್ಲ. ಈ ವೇದಭಾಗವನ್ನು ಹಾಗೂ ಸರಿಯಾದ ಬೋಧನೆ ಮತ್ತು ಜೀವನದ ಬಗ್ಗೆ ಹೇಳುವ ವೇದವಾಕ್ಯಗಳನ್ನು ನಾವು ಎಂದಿಗೂ ಬೇರ್ಪಡಿಸಬಾರದೆಂದು ನಾವು ಎಚ್ಚರಿಕೆಯುಳ್ಳವ ರಾಗಿರಬೇಕು (ಉದಾಹರಣೆ ತೀತ 2:1; ಯಾಕೋಬ 1:27). ಕೆಲವರ ತರ್ಕದ ಮತ್ತಾಯ 25:31-46ರ ಪ್ರಕಾರ ಕ್ರಿಸ್ತನಲ್ಲಿಯ ನಂಬಿಕೆಯು ಪ್ರಸ್ತಾಪವಿಲ್ಲದ್ದಕ್ಕಾಗಿ ನಾವ ಕಲ್ಪನಾತೀತ ವಾದ ತೀರ್ಮಾನಕ್ಕೆ ಬರುವುದಾಗಿದೆ ಅಂದರೆ ಯೇಸುವಿನಲ್ಲಿ ನಂಬಿಕೆಯು ನ್ಯಾಯತೀರ್ಪಿನ ಮೂಲ ವಾಗಿದೆ ಹೊರತು ಒಳ್ಳೆಯ ಕಾರ್ಯವನ್ನು ಮಾಡುವುದಕೆಕ ಅಲ್ಲ.

ಅದೇ ಸಮಯದಲ್ಲಿ, ಈ ವಚನಗಳು ನೈತಿಕವಾಗಿ ಶುದ್ಧವೂ ಮತ್ತು ಸೈದ್ಧಾಂತಿಕವಾಗಿ ಸರಿಯೂ ಆಗಿರುವದಷ್ಟೇ ಸಾಕಾಗದು ಎಂದು ಮನದಟ್ಟು ಮಾಡುವವು ಆಗಿವೆಯ ನಮ್ಮ ಧರ್ಮವು ಇತರರಿಗೆ ಸಹಾಯಿಸುವುದನ್ನು ಪ್ರಯೋಗಿಸುವದ್ದಾಗಿರಬೇಕು (ಯಾಕೋಬ 1:27), "ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು" (1 ಯೋಹಾನ 4:20); "ಹೀಗಿರುವುದರಿಂದ ಒಳ್ಳೆಯದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪಕ್ಕೊಳಗಾಗಿದ್ದಾನೆ" (ಯಾಕೋಬ 4:17).

ಕ್ರಿಸ್ತನು ಬರೋಣಕ್ಕೆ ಸಿದ್ಧರಾಗುವದು ಎಷ್ಟು ಮಹತ್ವದ್ದಾಗಿದೆ? ಸಿದ್ಧವಾಗದವರು "ನಿತ್ಯನಾಶನಕ್ಕೆ ಹೋಗುತ್ತಾರೆ" ಸಿದ್ಧರಾದವರು "ನಿತ್ಯಜೀವದೊಳಕ್ಕೆ ಹೋಗುತ್ತಾರೆ" (ಮತ್ತಾಯ 25:46). ನೀತಿವಂತರು ನಿತ್ಯತ್ವದ ಸುಖದಲ್ಲಿ ಹೋಗು ವಾಗ ಕೆಟ್ಟ ಜನರು ನಿರ್ನಾಮಗೊಳ್ಳುತ್ತಾರೆ ಎಂದು ಕೆಲವರು ವಿಶ್ಲೇಷಿಸುವವರಾಗಿದ್ದಾರೆ. ಹೇಗೋ, ಪರಲೋಕ ವಿರುವವರೆಗೂ ನರಕವು "ಇರುವದು" ಆಗಿದೆ ಎಂದು ಮತ್ತಾಯ 25:46 ಬೋಧಿಸುವುದಾಗಿದೆ.[15] ಕರ್ತನ ಮರಳುವಿಕೆಯಲ್ಲಿ ನಾವು ಸಿದ್ಧರಾಗಿರುವದು ಅವಶ್ಯವಾಗಿದೆ!

## ಪ್ರೀತಿಗೋಸ್ಕರ ಸಿದ್ಧರಾಗಿರೋಣ
## (ಮತ್ತಾಯ 26:1-5, 14-16; ಮಾರ್ಕ 14:1, 2, 10, 11; ಲೂಕ 22:1-6; ಯೋಹಾನ 13:1)

### ಯೇಸು: ಮುಂತಿಳಿಸುವಿಕೆ (ಮತ್ತಾಯ 26:1, 2; ಯೋಹಾನ 13:1)

ಕ್ರಿಸ್ತನ ಯೆರೂಸಲೇಮಿನ ನಾಶನದ ಮತ್ತು ಎರಡನೆಯ ಬರೋಣದ ಮೇಲಿನ ಪ್ರಸಂಗಗಳು (ಮತ್ತಾಯ 24 ಮತ್ತು 25) ಆತನು ಮತ್ತು ಆತನ ಅಪೊಸ್ತಲರು ಎಣ್ಣೆಮರಗಳ ಗುಡ್ಡಕ್ಕೆ ದಿನದ ವಿಶ್ರಾಂತಿಗಾಗಿ ಹೋದ ನಂತರ ಬೋಧಿಸಲ್ಪಟ್ಟಿತು (ಮತ್ತಾಯ 24:3). ಉಪದೇಶವು ಯೆಹೂದಿಗಳ ಎಣಿಕೆಯಂತೆ ಮರು ದಿನ ಆಗಿರಬಹುದಾದ ಮಂಗಳವಾರದ ಅಂತ್ಯಕ್ಕೆ ಹತ್ತಿರವಾದಂತೆ ಮತ್ತು ಸೂರ್ಯಮುಳುಗಿದರ ಹಿಂದೆ ಬಹುಶಃ ಪ್ರಾರಂಭವಾಯಿತು. ಈ ಎಣಿಕೆಯ ಪ್ರಕಾರ, ಯೇಸು ಮಾತನಾಡಿದ ಆ ಉಪದೇಶದ ಎರಡು ದಿನಗಳ ಹಿಂದೆ ಪಸ್ಕ ಹಬ್ಬವು ಇದ್ದು (ಮತ್ತಾಯ 26:2) ಅದು ಬುದುವಾರವಾಗಿತ್ತು. ಈ ಮಾತುಗಳು ಆತನು ಸ್ವಲ್ಪ ದಿನದಲ್ಲಿಯೇ ಮರಣಿಸುವನು ಎಂದು ಇನ್ನೊಂದನ್ನು ನೆನಪಿಸುವವು ಆಗಿದ್ದವು (ಮತ್ತಾಯ

26:1, 2 ಇದನ್ನು ಮತ್ತಾಯ 20:17-19ರ ಜೊತೆ ಹೋಲಿಸಿರಿ).

ಆತನು ಬುಧವಾರವನ್ನು ಅಥವಾ ಗುರುವಾರದ ಮೊದಲ ಭಾಗವನ್ನು ಹೇಗೆ ಕಳೆದನು ಎಂಬುದರ ಬಗ್ಗೆ ಯೇಸುವಿನಿಂದ ಮಾಡಲ್ಪಟ್ಟ ಸಂಕ್ಷಿಪ್ತ ಹೇಳಿಕೆಗಿಂತ, ಹೆಚ್ಚಾದ ಯಾವ ದಾಖಲೆಗಳನ್ನು ನಾವು ಹೊಂದಿಲ್ಲ.[16] ಇದು ಬಿರುಗಾಳಿಯು ಬರುವ ಮುನ್ನಿನ ಶಾಂತತೆಯು ಆಗಿತ್ತು. ಶುಕ್ರವಾರವನ್ನು ಆ ಹೊತ್ತಿನ ಸಮಯದ ಆರಂಭವನ್ನು ಕರ್ತನ ಮನಸ್ಸಿನ ಭಾವನೆಯ ಒಳನೋಟವನ್ನು ಯೋಹಾನ 13:1 ನಮಗೆ ಕೊಡುವುದಾಗಿದೆ: "ಪಸ್ಕ ಹಬ್ಬದ ಮುಂದೆ ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುವ ಕಾಲ ಬಂತೆಂದು ತಿಳುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು." ಬುಧವಾರದ ಮತ್ತು ಗುರುವಾರದ ಆರಂಭದಲ್ಲಿ ಯೇಸು ನಿಸ್ಸಂಶಯವಾಗಿ ತಾನು ಪ್ರೀತಿಸುತ್ತಿದ್ದ ಶಿಷ್ಯರನ್ನು ಸಿದ್ಧಪಡಿಸುತ್ತಾ ಬಂದನು. ಆತನು ಅವರನ್ನು ಖಚಿತವಾಗಿ ತನ್ನ ತಂದೆಯೊಡನೆ ಆತ್ಮೀಕವಾಗಿ ಬಲಪಡಿಸಿದನು ಮತ್ತು ಮುಂದಿರುವ ಕಷ್ಟಕವಾದ ಪರೀಕ್ಷೆಗಾಗಿ ಉಳಿದುಕೊಳ್ಳಲು ಪ್ರಯತ್ನಿಸಿದನು.[17] ಆತನು ಕಾಲ್ವರಿಗಾಗಿ ಸಿದ್ಧತೆಯನ್ನು ನಡೆಸಿದ್ದನು.

### ಮಹಾಸಭೆಯು: ಕುತಂತ್ರ (ಮತ್ತಾಯ 26:3-5; ಮಾರ್ಕ 14:1, 2; ಲೂಕ 22:1, 2)

ಕ್ರಿಸ್ತನು ಬಹುಶಃ ವಿಶ್ರಾಂತಿಯಲ್ಲಿದ್ದನು, ಆದರೆ ಆತನ ವೈರಿಗಳು ಇರಲಿಲ್ಲ. ಬುಧವಾರ (ಮಾರ್ಕ 14:1) ಮಹಾಸಭೆಯು ರಹಸ್ಯ ಸ್ಥಳದಲ್ಲಿ[18] ಕಾಯಫನೆಂಬ ಮಹಾಯಾಜಕನ ಮಠದಲ್ಲಿ ಸಭೆಯನ್ನು ನಡೆಸಿತು (ಮತ್ತಾಯ 26:3). ಕಾಯಫನು[19] ಯೇಸುವನ್ನು ಕೊಲ್ಲಬೇಕೆಂದು ನಿರ್ಧಾರಮಾಡಿದ ಹಿಂದಿನ ಸಭೆಯ ನಿರ್ದೇಶಕನಾಗಿದ್ದನು (ಯೋಹಾನ 11:47-53; ಗಮನಿಸಿ ವಚನ 49). ಮಂಗಳವಾರದ "ಮಾತುಗಳ ಯುದ್ಧದಲ್ಲಿ" ಯೇಸುವನ್ನು ಅವಮಾನಿಸುವ ನಿಟ್ಟಿನಲ್ಲಿ ವಿಫಲತೆಯನ್ನು ಹೊಂದಿದ ಸಭೆಯು ಏನೇ ಆದರೋ ಆತನು ಮರಣಿಸಲೇಬೇಕು ಎಂಬುದಕ್ಕೆ ಹೆಚ್ಚು ಸಂಕಲ್ಪಮಾಡಿಕೊಂಡಿದ್ದರು. ಸಮಸ್ಯೆ ಎಂದರೆ ಆ ದಿನದ ಆರಂಭದಲ್ಲಿಯೇ ಸಾರ್ವಜನಿಕವಾಗಿ ಆತನನ್ನು ತೆಗೆದುಕೊಳ್ಳಲು ಅವರು ಭಯಪಟ್ಟರು (ನೋಡಿರಿ ಲೂಕ 22:2), ಮತ್ತು ಏಂಕಾಗಿಯಾಗಿರುವಾಗ ಆತನನ್ನು ಹಿಡಯದಾದರು. ಯಾಕೆಂದರೆ ರಾತ್ರಿವೇಳೆ ಆತನು ಎಲ್ಲಿರುತ್ತಿದ್ದನೆಂಬುದನ್ನು ಅವರು ತಿಳಿದಿರಲಿಲ್ಲ. ಅಂತೆಯೇ ಹಬ್ಬವು ಮುಗಿಯುವ ತನಕ ಅವರು ಕಾದಿರಲೇಬೇಕಿತ್ತು. ನಂತರ ಹಬ್ಬವು ಮುಗಿಯುವ ಮುನ್ನವೇ ಆತನನ್ನು ತೆಗೆದುಕೊಳ್ಳಬೇಕೆಂದು ಅವರು ಯೋಚಿಸಿದರು.

### ಯೂದನು: ಗುರುದ್ರೋಹ (ಮತ್ತಾಯ 26:14-16; ಮಾರ್ಕ 14:10, 11; ಲೂಕ 22:3-6)

ಮಹಾಸಭೆಯ ಸಂದಿಗ್ಧತೆಯು ಅವರು ನಿರೀಕ್ಷೆ ಮಾಡದ ರೀತಿಯಲ್ಲಿ ಪರಿಹಾರವಾಯಿತು: ಯೇಸುವಿನ ಒಬ್ಬ ಅಪೊಸ್ತಲನು ಪರಿಹಾರದೊಂದಿಗೆ ಕಾಣಿಸಿಕೊಂಡನು. "ಆ ಮೇಲೆ ಹನ್ನೆರಡು ಮಂದಿಯಲ್ಲಿ ಒಬ್ಬನಾದ ಈಸ್ಕರಿಯೋತ ಯೂದನು ಯೇಸುವನ್ನು ಮಹಾಯಾಜಕರಿಗೆ ಹಿಡಕೊಡಬೇಕೆಂದು ಅವರ ಬಳಿಗೆ ಹೋದನು" (ಮಾರ್ಕ 14:10). ಪ್ರತ್ಯಕ್ಷವಾಗಿ, ಯೂದನು ಕೆಲವು ಕಾರಣಗಳಿಂದಾಗಿ ಉಳಿದ ಅಪೊಸ್ತಲರನ್ನು ಬಿಟ್ಟಿದ್ದನು. ಹೇಗೂ ಸಭೆಯು ಎಲ್ಲಿ ನಡೆಯುತ್ತಿದೆ ಎಂಬುದನ್ನು ಆತನು ಕಂಡುಕೊಂಡಿದ್ದನು. ಒಂದು ಸಾರಿ ಅವರಿಗೆ "ಅವನನ್ನು ಹಿಡುಕೊಟ್ಟರೆ ನನಗೆ ಏನು ಕೊಡುತ್ತೀರಿ" ಎಂದು ಕೇಳಿದ್ದನು (ಮತ್ತಾಯ 26:15).

ಆತನು ಮಹಾಯಾಜಕನೊಡನೆ ಮತ್ತು ಅಧಿಕಾರಗಳೊಂದಿಗೆ ಅವರಿಗೆ ಆತನನ್ನು *ಹೇಗೆ* ಹಿಡುಕೊಡಬಹುದು ಎಂಬುದರ ಬಗ್ಗೆ ಚರ್ಚಿಸಿದನು (ಲೂಕ 22:4; ಒತ್ತಿ ಹೇಳಿದ್ದು ನನ್ನದು). ಯೂದನು ಯೇಸುವಿನೊಡನೆ ಇರುವುದರಿಂದ (ನೋಡಿರಿ ಯೋಹಾನ 18:2),

ರಾತ್ರಿಯಲ್ಲಿ ಅವರನ್ನು ಆತನೆಡೆಗೆ ನಡೆಸಲು ಶಕ್ತನಾದನು. ನಂತರ ಆತನು "ಗದ್ದಲವಾಗ ದಂತೆ ಅವರಿಗೆ ಹಿಡುಕೊಡಲು" ಆತನಿಗೆ ಸಾಧ್ಯವಾಯಿತು (ಲೂಕ 22:6; NIV). ಮಹಾ ಸಭೆಯು ಈ ತಿರವಿನ ಘಟನೆಯಿಂದ ಉಲ್ಲಾಸಿತವಾಯಿತು (ಮಾರ್ಕ 14:11; ಲೂಕ 22:5; NIV ನೋಡಿರಿ). ಸಂತೋಷಭರಿತರಾಗಿ "ಅವರು ಆತನಿಗೆ ಮೂವತ್ತು ರುಪಾಯಿ ತೂಗಿ ಕೊಟ್ಟರು" (ಮತ್ತಾಯ 26:15).

ಯೂದನ ದುಷ್ಟ ಕೃತ್ಯದ ಬಗ್ಗೆ ಶತಮಾನಗಳ ಹಿಂದೆ ಹೇಳಲ್ಪಟ್ಟ ಪ್ರವಾದನೆಯು ನೆರವೇರಿತು (ಜೆಕರ್ಯ 11:12). ಬೆಳ್ಳಿಯ ನಾಣ್ಯಗಳು ಶೆಕೆಲಗಳು (ಅಥವಾ ಸೆಟೆಯರ್ಸ್ ಶೆಕಲಗಳಿಗೆ ಸಮಾನವಾದವು)[20] ಆಗಿದ್ದವು ಎಂದ ಅನೇಕ ಪಂಡಿತರು ನಂಬುತ್ತಾರೆ. ಒಂದು ಶೆಕೆಲ್ (ಅಥವಾ ಸೆಂಟರ್) ಮೌಲ್ಯವು ಸುಮಾರು ನಾಲ್ಕು ದಿನಾರು ಆಗಿದ್ದವು.[21] ಈ ಅಧಿಕಾರಿಗಳು ಸರಿಯಾಗಿ ಇದ್ದುದಾಗಿದ್ದಾರೆ. "ಮೂವತ್ತು ಬೆಳ್ಳಿ ನಾಣ್ಯಗಳು ಸಾಮಾನ್ಯ ಕೂಲಿಯೊಬ್ಬನು[22] ಇದನ್ನು ಸಂಪಾದಿಸುವುದಕ್ಕೆ ನಾಲ್ಕು ತಿಂಗಳು ಬೇಕಾಗುತ್ತಿತ್ತು" ಇದನ್ನು ಮಾಡಲು ಒಬ್ಬ ಸೇವಕನ ಸಂಬಳವನ್ನು ಅಂದಾಜು ಮಾಡಲಾಗಿದೆ.[23]

ಮೂವತ್ತು ಬೆಳ್ಳಿ ನಾಣ್ಯಗಳ ಮೊದಲ ಕಂತಿನ ಹಣವಾಗಿದ್ದು ಕರ್ತನು ಅವರ ಸುಪರ್ದಿಗೆ ಸಿಕ್ಕಮೇಲೆ ಯೂದನು ಇನ್ನೂ ಹೆಚ್ಚಿ ಹಣವನ್ನು ಪಡೆಯುವವನಿದ್ದಿರಬೇಕು. ಮಾರ್ಕ 14:11ರ ಪ್ರಕಾರ ಸಭೆಯು ಆತನಿಗೆ ಹಣಕೊಡುವುದನ್ನು *"ವಾಗ್ದನ"* ಮಾಡಿದ್ದರು (ಒತ್ತಿ ಹೇಳಿದ್ದು ನನ್ನದು) ಲೂಕನ ಪ್ರಕಾರ, ಅವರು "ಅವನಿಗೆ ಹಣವನ್ನು ಕೊಡಲು" ಒಪ್ಪಿಕೊಂಡರು: ಮತ್ತು "ಆತನು ಸಮ್ಮತಿಯನ್ನು ಕೊಟ್ಟನು" (ಲೂಕ 22:5, 6), ಮೂವತ್ತು ಬೆಳ್ಳಿನಾಣ್ಯಗಳು ಕೇವಲ ಸಂಚಕಾರದ ಹಣವಾಗಿ ಇದ್ದದ್ದಾದರೆ, "ಯೇಸುವನ್ನು ಹಿಡುಕೊಡುವುದಕ್ಕೆ ಅನುಕೂಲವಾದ ಸಮಯವನ್ನು ನೋಡುವುಕ್ಕಾಗಿ ಅಪೊಸ್ತಲನ ಜಾಣತನ ಎಂದು ಇದನ್ನು ವಿವರಿಸಬಹುದು" (ಮತ್ತಾಯ 26:16).[24]

ಯೂದನ ಗುರುದ್ರೋಹವು "ಇತಿಹಾಸದ ಒಂದು ಗೂಢಪ್ರಶ್ನೆ" ಎಂದು ಕರೆಯಲ್ಪಡುತ್ತದೆ.[25] ಆ ಕತ್ತಲೆಯ ದಿನದಿಂದ, ಯಾಕೆ ಎಂಬ ಪ್ರಶ್ನೆಯ ಜೊತೆ ಜನರು ಹೋರಾಡುತ್ತಿದ್ದಾರೆ. ದೇವವಾಕ್ಯದಲ್ಲಿ ಸೂಚಿತವಾದ ಮೂಲವಾದ ಮೂಲವಾದ ಪ್ರೇರ ಣೆಯು ಯೂದನ ದುರಾಶೆ ಆಗಿದೆ (ಮತ್ತಾಯ 26:14, 15; ನೋಡಿ ಯೋಹಾನ 12:6). ಈ ಅಪೊಸ್ತಲನು ಕೆಲ ದಿನಗಳ ಹಿಂದೆ ಯೇಸುವನ್ನು ಗದರಿಸುವ ಮೂಲಕ ತನ್ನ ಜಾಣತನವನ್ನು ಪ್ರದರ್ಶಿಸಿದ್ದನು (ಯೋಹಾನ 12:4-8). ತನ್ನ ಜನಪ್ರಿಯತೆಯನ್ನು ಬಂಡವಾಳ ಮಾಡಿಕೊಳ್ಳು ವಲ್ಲಿ ಯೇಸು ವಿಫಲವಾದದ್ದಕ್ಕಾಗಿ ಆತನು ಬಹುಶಃ ನಿರಾಶನಾಗಿರಬಹುದು.[26] H. I. Hester ರವರು ಹೀಗೆ ಬರೆಯುತ್ತಾರೆ,

> ಈಗಾಗಲೇ ಆತನು ಯೆರೂಸಲೇಮಿನಲ್ಲಿ ಯೇಸುವಿನ ರಾಜ್ಯದ ಪ್ರತಿಫಲದ ಬಗ್ಗೆ ಶಂಕೆಯನ್ನು ವ್ಯಕ್ತಪಡಿಸಿದ್ದನು. ಯಾವುದೇ ಐಹಿಕ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಇದ ಬಿದ್ದ ಹೋದದ್ದು ಎಂದು ಆತನು ಅರಿತುಕೊಂಡಿರಬಹುದು. ಅಲ್ಪ ಸಾಧನೆಗಾಗಿ ಯೇಸುವಿನೊಡನೆ ಇರುವುದನ್ನು ತಾನು ಹೊಂದಿದ್ದಾನೆ ಎಂದು ಅರಿತುಕೊಂಡಿದ್ದನು … ಹೊಸ ಯೋಜನೆಯು ಈ ಬೀಳುವಿಕೆಯ ಬಗೆಗೆ ಆದಾಗಿನಿಂದ ಬಹುಶಃ ಆತನು ಅದರಿಂದ ಬರುವ ಲಾಭದಿಂದ ಉತ್ತಮವಾದದ್ದನ್ನು ಹೊಂದಬಹುದೆಂದು ಬಹುಶಃ ಆತನು ಯೋಚಿಸಿರಬಹುದು.[27]

ಕೆಲವರು ಯೂದನಿಗೆ ದೋಷರಹಿತವಾದ ಸಂಗತಿಗಳನ್ನು ಕೊಡುವವರಾಗಿ ದ್ದಾರೆ,[28] ಆದರೆ ಆತನ ಉದ್ದೇಶಗಳು ಶುದ್ಧವಾಗಿದ್ದಾದರೆ, ಸೈತಾನನು ಆತನ ಜೀವಿತನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. "ಸೈತಾನನು ಯೂದನಲ್ಲಿ ಪ್ರವೇಶಿಸಿದನು" ಎಂದು ಹೇಳಲ್ಪಟ್ಟಿದೆ (ಲೂಕ 22:3; ನೋಡಿರಿ ಯೋಹಾನ 13:27).[29] ಯೂದನ

ಪ್ರತಿಭಟಿಸಲಾಗದ ಶೈಲಿಯನ್ನು ಅನುಭವಸಿದನು ಎಂದು ಈ ವಚನಗಳ ಅರ್ಥೈಸುವುದಿಲ್ಲ (ನೋಡಿರ ಯಾಕೋಬ 4:7). "ಬದಲಾಗಿ ಸೈತಾನನು ... ಸೀಮೋನನ ಮಗನಾದ ಇಸ್ಕರಿಯೋತನ ಮಗನಾದ ಯೂದನ ಮನಸ್ಸಿನಲ್ಲಿ ಯೇಸುವನ್ನು ಹಿಡಕೊಡಬೇಕೆಂಬ ಆಲೋಚನೆಯನ್ನು ಹಾಕಿದನು" (ಯೋಹಾನ 13:2).[30] ಸೈತಾನನು ಯೂದನ ಮನದಲ್ಲಿ ಆಲೋಚನೆಯನ್ನು ಹಾಕಿದಂತೆಯೇ, ನಮ್ಮ ಸುತ್ತಲಿರುವ ಸಂಗತಿಗಳನ್ನು ಯುಕ್ತಿಯಿಂದ ಮಾಡುವ ಮೂಲಕ ನಮ್ಮ ಮನದಲ್ಲಿಯೂ ಹಾಕುತ್ತಾನೆ. ಸೈತಾನನು ಯೂದನನ್ನು ಪ್ರಭಾವಿತಗೊಳಿಸಲು ಹೇಗೆ ಸಮರ್ಥನಾದನು? ಯಾಕೆಂದರೆ ಈ ಅಪೋಸ್ತಲನು ತನ್ನನ್ನು ತಾನೇ ಮೋಸಗಾರನ ನಿಯಂತ್ರಣಕ್ಕೆ ಒಪ್ಪಿಸಿಕೊಟ್ಟನು.

ವ್ಯವಸ್ಥೆಯು ಮಾಡಲ್ಪಟ್ಟಿತು, ಯೂದನು ಯೇಸುವಿನೆಡೆಗೆ ಮತ್ತು ಇತರ ಅಪೋಸ್ತಲರ ಹತ್ತಿರ ಮರಳಿದನು.[31] ಬಾಹ್ಯವಾಗಿ, ಆತನು ಅವರ ಮುಂದಿದ್ದನು;[32] ಆದರೆ ಆಂತರಿಕವಾಗಿ ಆತನ ಮನದಲ್ಲಿ ಒಂದು ಸಂಗತಿಯು ಆವರಿಸಿಕೊಂಡಿತ್ತು: "ಆ ಜನರೊಂದಿಗೆ ಹೇಗೆ ನನ್ನ ಒಪ್ಪಂದವನ್ನು ಪೂರ್ಣಗೊಳಿಸಲಿ?" ಎಂಬುದೇ. "ಆ ಸಮಯದಿಂದ ಅವನು ಆತನನ್ನು ಹಿಡುಕೊಡುವುದಕ್ಕೆ ಅನುಕೂಲವಾದ ಸಮಯವನ್ನು ನೋಡುತ್ತಿದ್ದನು" (ಮತ್ತಾಯ 26:16).

## ಪಸ್ತಕ್ಕೆ ಸಿದ್ಧತೆ
## (ಮತ್ತಾಯ 26:17-20; ಮಾರ್ಕ 14:12-18; ಲೂಕ 22:7-18, 24-30)

ಬುಧವಾರ ರಾತ್ರಿ (ನಾವು ಸಮಯವನ್ನು ಎಣಿಸುತ್ತಿರುವ ಹಾಗೆ), ಯೇಸು "ಕೊನೆಯದಾಗಿ ಕೆಲ ಸಮಯ ನೆಲದ ಮೇಲೆ ವಿಶ್ರಾಂತಿಗಾಗಿ ಮಲಗಿದನು. ಗುರುವಾರ ಮುಂಜಾನೆ ಆತನು ಎದ್ದ ಮೇಲೆ ಮರಳಿ ಎಂದಿಗೂ ಮಲಗಲಿಲ್ಲ."[33] ಗುರುವಾರ ಪಸ್ಕ ಹಬ್ಬದ ಮುಂಚಿನ ದಿನವು ಆಗಿದ್ದು "ಹುಳಿಯಿಲ್ಲದ ರೊಟ್ಟಿಯ ಹಬ್ಬ" ಎಂದು ಕರೆಯಲ್ಪಡುತ್ತಿತ್ತು (ಮತ್ತಾಯ 26:17; ಮಾರ್ಕ 14:12; ಲೂಕ 22:7), ಯಾಕೆಂದರೆ ವಿಶೇಷ ಹಬ್ಬಕ್ಕಾಗಿ ಮಾಡುವಂಥ ಸಿದ್ಧತೆಯ ಆರಂಭವಾಗಿತ್ತು.[34] ಆ ದಿನದಂದು ಹಬ್ಬದ ಪೂರ್ವನಿರೀಕ್ಷೆಗಾಗಿ: "ಪಸ್ಕದ ಕುರಿಯು ಕೊಯ್ಯಲ್ಪಡುತ್ತಿದ್ದು" (ಲೂಕ 22:7; ಮಾರ್ಕ 14:12). ಸೂರ್ಯನು ಮುಳುಗಿದ ನಂತರ ಅದು ತಿನ್ನಲ್ಪಡುತ್ತಿತ್ತು (ಯೆಹೂದಿ ಎಣಿಕೆಯ ಪ್ರಕಾರ ಅದು ಶುಕ್ರವಾರ).

### ಪಸ್ಕವು ಸಿದ್ಧಪಡಿಸಲ್ಪಟ್ಟಿತು
### (ಮತ್ತಾಯ 26:17-19; ಮಾರ್ಕ 14:12-16; ಲೂಕ 22:7-13)

ಶಿಷ್ಯರು ಯೇಸುವಿನ ಹತ್ತಿರ ಬಂದು "ಪಸ್ಕದ ಊಟಮಾಡುವುದಕ್ಕೆ ನಾವು ನಿನಗೆ ಎಲ್ಲಿ ಸಿದ್ಧಮಾಡಬೇಕೆನ್ನುತ್ತಿ?" ಎಂದು ಕೇಳಿದರು (ಮತ್ತಾಯ 26:17). ಯೇಸು ಪೇತ್ರ ಮತ್ತು ಯೋಹಾನನರಿಗೆ ಸಿದ್ಧತೆಯನ್ನು ಮಾಡಲು ಕಳುಹಿಸಿದನು (ಲೂಕ 22:8; ನೋಡಿರಿ ಮಾರ್ಕ 14:13). ಆತನು ಅವರಿಗೆ ಅಸಜವಾದ ಸೂಚನೆಗಳನ್ನು ಕೊಟ್ಟನು. "ನೀವು ಪಟ್ಟಣದೊಳಕ್ಕೆ ಹೋಗಿರಿ, ಅಲ್ಲಿ ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತುಕೊಂಡು ನಿಮ್ಮೆದುರಿಗೆ ಬರುವನು" (ಮಾರ್ಕ 14:13). ಸಹಜವಾಗಿ ಪುರುಷರ ಹೊರತಾಗಿ ಸ್ತ್ರೀಯರು ನೀರಿನ ಜಗ್ಗನ್ನು ತೆಗೆದುಕೊಂಡು ಹೋಗುತ್ತಿದ್ದರಿಂದ ಆ ಮನುಷ್ಯನನ್ನು ಕಂಡುಕೊಳ್ಳುವದು ಸುಲಭ ವಾಗಿತ್ತು. ಕ್ರಿಸ್ತನು ಇಬ್ಬರು ಶಿಷ್ಯರಿಗೆ ಆವ್ಯಕ್ತಿಯನ್ನು ಹಿಂಬಾಲಿಸಲು ಹೇಳಿದನು. "ಅವನು ಯಾವ ಮನೆಗೆ ಹೋಗುವನೋ ಆ ಮನೆಯ ಯಜಮಾನನಿಗೆ ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ ಊಟವನ್ನು ಮಾಡುವುದಕ್ಕೆ ತನಗೆ ಭೋಜನ ಶಾಲೆಯು ಎಲ್ಲಿ ಎಂದು ಕೇಳುತ್ತಾನೆ ಎಂದು ಹೇಳಿರಿ?" ಅಂದನು (ಮಾರ್ಕ 14:13, 14; ನೋಡರಿ ಮತ್ತಾಯ 26:18).

ಕ್ರಿಸ್ತನು ಬಳಸಿದ ಈ ಸುತ್ತಿನ ಪ್ರಕ್ರಿಯೆಯು ಇದು ಸೂಚಿತವಾದುದು ಆಗಿದ್ದ ಸಂಜೆಯ ತನಕ ಯೂದನು ತನ್ನ ಇರುವನ್ನು ಮಹಾಸಭೆಯವರಿಗೆ ಪ್ರಕಟಿಸಿರಲಿಲ್ಲ. ಇಲ್ಲವಾದರೆ ಕರ್ತನ ಭೋಜನದಲ್ಲಿನ ಅನೇಕ ಮೂಲ ಘಟನೆಗಳು "ಶ್ರೇಷ್ಟ ಬೀಳ್ಕೊಡುವ ಉಪದೇಶವಾಗಿ" ಇರುತ್ತಿದ್ದು (ಯೋಹಾನ 14-16), ಕರ್ತನ ಪ್ರಾರ್ಥನೆ (ಯೋಹಾನ 17) ಮತ್ತು ಗೆತ್ಸೆಮನೆ ತೋಟದಲ್ಲಿ ಪ್ರಕಟವಾದಂಥದ್ದು ಯಾವುದೇ ಸ್ಥಾನವನ್ನು ಪಡೆಯುತ್ತಿರಲಿಲ್ಲ. ಯೇಸು ಮೊದಲೇ ಈ ಸನ್ನಿವೇಶಗಳನ್ನು ವ್ಯವಸ್ಥೆಮಾಡಿದ್ದನೇ (ಒಬ್ಬ ಮನುಷ್ಯನು ಜಗ್ಗನ್ನು ಹೊತ್ತುಕೊಂಡು ಹೋಗುವದು) ಅಥವಾ ಅದನ್ನು ಕೇವಲ ತನ್ನ ಅಭ್ಯಾಸಬಲದಿಂದ ಹಾಗೆ ಹೇಳಿದನೇ? ನಮಗೆ ಹೇಳಿಲ್ಲ.

ಯೇಸು ಪೇತ್ರ ಯೋಹಾನನರಿಗೆ ಆ ಮನೆಯ ಯಜಮಾನನು ಅವರಿಗೆ "ಮೇಲಂತಸ್ತಿನ ದೊಡ್ಡ ಕೊಠಡಿಯನ್ನು" ತೋರಿಸುತ್ತಾನೆ ಎಂದು ಹೇಳಿದನು (ಮಾರ್ಕ 14:15). ಒಂದು ಸಂಪ್ರದಾಯದ ಪ್ರಕಾರ, ಇದು "ಮೇಲಂತಸ್ತಿನ ಕೋಣೆ" ಆಗಿದ್ದು ನಂತರದಲ್ಲಿ ಪಂಚಾಶತ್ತಮ ಹಬ್ಬದ ಮುಂಚೆ ಅಪೊಸ್ತಲರು ಅಲ್ಲಿಯೇ ಇದ್ದರು ಎನ್ನಲಾಗಿದೆ (ಅಪೊಸ್ತಲರ ಕೃತ್ಯಗಳು 1:12, 13). ಆ ಮನೆಯು ಯೋಹಾನ ಮಾರ್ಕನ ತಾಯಿಯ ಮನೆಯು ಆಗಿತ್ತು ಎಂದೂ ಕೆಲವರು ಊಹಿಸುವವರಾಗಿದ್ದಾರೆ (ಅಪೊಸ್ತಲರ ಕೃತ್ಯಗಳು 12:12). ಆ ಮನೆಯು ಪ್ರತ್ಯಕ್ಷವಾಗಿ ಕರ್ತನ ಶಿಷ್ಯರಿಗೆ ಸಂಬಂಧಿಸಿದ್ದು ಆಗಿತ್ತು (ನೋಡಿರಿ ಮತ್ತಾಯ 26:18); ಅದಕ್ಕಿಂತ ಹೆಚ್ಚಾಗಿ ದೇವವಾಕ್ಯವು ನಮಗೆ ಹೆಚ್ಚಿನ ಮಾಹಿತಿಯನ್ನು ಕೊಡಲಾರದು.

ಇಬ್ಬರೂ ಅಪೋಸ್ತರು ಆ ಕೋಣೆಯು ಸಿದ್ಧವಾಗವುದಾಗಿ ವಾಗ್ದಾನವನ್ನು ಹೊಂದಿದರು (ಮಾರ್ಕ 14:15). ಕೋಣೆಯು ಶುದ್ಧಪಡಿಸಲ್ಪಟ್ಟಿತು ಮತ್ತು ಮೇಜು ನೆಲದ ಹಾಸು ಸ್ಥಳದಲ್ಲಿ ಇಡಲ್ಪಟ್ಟವು, ಮತ್ತು ಕೋಣೆಯ ಹೊರಗೆ ಕಾಲುತೊಳೆಯಲು ಪ್ರತಿಯೊಂದು ಸಿದ್ಧವಾಗಿತ್ತು (ನೋಡಿರಿ ಯೋಹಾನ 13:3-5). ಬಹುಶಃ ಹುಳಿಯಿಲ್ಲದ ಹಿಟ್ಟಿನ ರೊಟ್ಟಿಯ ಸಂಸ್ಕಾರದ ಆಚರಣೆಗಾಗಿಯೂ ಎಲ್ಲಾ ಸಿದ್ಧತೆಗಳು ಮಾಡಲ್ಪಟ್ಟಿದ್ದವು (ನೋಡಿರಿ ವಿಮೋಚನಕಾಂಡ 12:15).[35]

ಪೇತ್ರ ಮತ್ತು ಯೋಹಾನರು ಆತನು ಹೇಳಿದಂತೆಯೇ ಇರುವುದನ್ನು ಕಂಡರು ಮತ್ತು ಪಸ್ಕಕ್ಕೆ ಬೇಕಾದದ್ದನ್ನು ಮಾಡಿದರು (ಮಾರ್ಕ 14:16). ಮಾಡುವುದು ಬೇಕಾದಷ್ಟಿತ್ತು: ಕುರಿಯು ಈಗಾಗಲೇ ಒದಗದಿದ್ದರೆ, ಅದು ಕೊಳ್ಳಲ್ಪಡಬೇಕಿತ್ತು[36] ಅದು ದೋಷರಹಿತಾದದ್ದಾಗಿರಬೇಕು (ವಿಮೋಚನಕಾಂಡ 12:5). ಕುರಿಯು ಆಚರಣೆಯ ವಧಿಸುವಿಕೆಗಾಗಿ ದೇವಾಲಯಕ್ಕೆ ತೆಗೆದುಕೊಂಡು ಹೋಗಬೇಕಾಗಿತ್ತು. ಅಲ್ಲಿ ಶಿಷ್ಯರು ಅದನ್ನು ಕೊಲ್ಲಬೇಕಿತ್ತು, ಯಾಜಕನು ವೇದಿಯನ್ನು ಶುದ್ಧಮಾಡುವುದಕ್ಕಾಗಿ ಅದರ ರಕ್ತವನ್ನು ಹಿಡಿದುಕೊಳ್ಳುತ್ತಿದ್ದನು. ನಂತರ ಕೆಲಭಾಗಗಳ ವೇದಿಯಲ್ಲಿ ಸುಡಲು ತೆಗೆದುಕೊಳ್ಳುತ್ತಿದ್ದರು (ನೋಡಿರಿ ಯಾಜಕಕಾಂಡ 3:3-5). ಅದರ ದೇಹವು ಅದರ ಮಾಲೀಕರಿಗೆ ಮರಳಿಸಲ್ಪಡುತ್ತಿತ್ತು. ನಂತರ ಆ ಕುರಿಯು ಸುಡುವುದಕ್ಕೆ ಹೋಗುತ್ತಿತ್ತು (ವಿಮೋಚನಕಾಂಡ 12:8). ಸಿದ್ಧತೆಯ ಆರಂಭದಲ್ಲಿ ಅಥವಾ ಆಚರಣೆಯ ಆರಂಭದಲ್ಲಿ ಅದರ ಒಂದು ಎಲುಬು ಮುರಿಯದ ಹಾಗೆ ಅವರು ನೋಡಿ ಕೊಳ್ಳಬೇಕಿತ್ತು (ವಿಮೋಚನಕಾಂಡ 12:46; ಅರಣ್ಯಕಾಂಡ 9:12).[37] ಪಸ್ಕದ ಊಟದ ಇತರ ಸಂಗತಿಗಳು ಸಹ ಮುಂದಿನವುಗಳನ್ನು ಒಳಗೊಂಡು ಒದಗಿಸಲ್ಪಡುತ್ತಿದ್ದವು ಮತ್ತು ಸಿದ್ಧವಾಗುತ್ತಿದ್ದವು:[38]

- ಹುಳಿಯಿಲ್ಲದ ರೊಟ್ಟಿ (ವಿಮೋಚನಕಾಂಡ 12:8, 18-20; 13:6, 7; 34:18, 25; ಯಾಜಕಕಾಂಡ 23:6; ಅರಣ್ಯಕಾಂಡ 9:11; 28:17), "ಕಷ್ಟವನ್ನು ಸೂಚಿಸುವ ಹುಳಿಯಿಲ್ಲದ ರೊಟ್ಟಿ" (ಧರ್ಮೋಪದೇಶಕಾಂಡ 16:3, 8).
- ದ್ರಾಕ್ಷಾರಸ (ನೋಡಿರಿ ಮತ್ತಾಯ 26:27, 29). ಯೇಸುವಿನ ದಿನದಲ್ಲಿ,

ಆಚರಣೆಗಳಲ್ಲಿ ವಿಮೋಚನಕಾಂಡ 6:6, 7ರ ನಾಲ್ಕು ವಾಗ್ದಾನಗಳನ್ನು ಪ್ರತಿನಿಧಿಸುವ ನಾಲ್ಕು ಕಪ್ಪು ದ್ರಾಕ್ಷಾರಸವನ್ನು[39] ಬಳಸಲಾಗುತ್ತಿತ್ತು.

- ಕಹಿಯಾದ ಸೊಪ್ಪು (ವಿಮೋಚನಕಾಂಡ 12:8; ಅರಣ್ಯಕಾಂಡ 9:11), ಐಗುಪ್ತದಲ್ಲಿನ ಗುಲಾಮಗಿರಿಯನ್ನು ನೆನಪಿಸುವುದಕ್ಕಾಗಿ.
- ಹೆಚ್ಚಿನ ಹಣ್ಣುಗಳಿಂದ ಮತ್ತು ನೆನಸಿದ ಬೀಜಗಳ ಜೊತೆ ಹುಳಿರಸ ಅಥವಾ ದ್ರಕ್ಷಾರಸಗಳ[40] ಗಟ್ಟಿಯಾದ ಅದ್ದಿಕೊಳುವಂತಹ ಪೇಸ್ಟ್ ಇವು ಐಗುಪ್ತದಲ್ಲಿ ಇಸ್ರಾಯೇಲರು ಮಾಡುತ್ತಿದ್ದ ಇಟ್ಟಿಗೆಗಳನ್ನು ಪ್ರತಿನಿಧಿಸುವವು ಆಗಿದ್ದವು.[41]

**ಪಸ್ಕವು ಆಚರಿಸಲ್ಪಟ್ಟದ್ದು (ಮತ್ತಾಯ 26:20; ಮಾರ್ಕ 14:17, 18; ಲೂಕ 22:14-18)**

ಸೂರ್ಯನು ಮುಳುಗಿದ ಸ್ವಲ್ಪಹೊತ್ತಿನ ಮುಂಚೆ ಯೇಸು ಸಿದ್ಧವಾದ ಆ ಸ್ಥಳಕ್ಕೆ "ತನ್ನ ಹನ್ನೆರಡು ಜನ ಶಿಷ್ಯರೊಡನೆ ಅಲ್ಲಿಗೆ ಬಂದನು" (ಮಾರ್ಕ 14:17), ರಬ್ಬಿಗಳ ಬೋಧನೆಯ ಪ್ರಕಾರ, ಪ್ರತಿಯೊಂದು ಕುರಿಯು ಹತ್ತು ಜನಕ್ಕಿಂತ ಕಡಿಮೆಯಿರುವವರಿಂದ ಮತ್ತು ಇಪ್ಪತ್ತಕ್ಕಿಂತ ಹೆಚ್ಚಿರುವವರಿಂದ ತಿನ್ನಬಾರದು ಎಂದಿದೆ.[42] ಮೇಲುಪ್ಪರಿಗೆಯಲ್ಲಿ, ಹದಿಮೂರು ಜನರು ಕೈಯಿಂದ ತಿನ್ನಲು ಸುಲಭವಾಗುವಂತೆ ಚಿಕ್ಕತುಂಡುಗಳಾಗಿ ಕತ್ತರಿಸಿದ ಸುಟ್ಟ ಕುರಿಯನ್ನು ಹಂಚಿಕೊಳ್ಳುವವರಿದ್ದರು.[43]

ಯೇಸು ಪಸ್ಕದ ಊಟದೊಡನೆ ಕೆಳ ಮೇಜಿನ ಹಾಸಿಗೆಗೆ ಒರಗಿಕೊಂಡಿದ್ದನು (ಮತ್ತಾಯ 26:20; ಮಾರ್ಕ 14:18; ಲೂಕ 22:14).[44] ಯೋಹಾನನು ಆತನ ಬಲಗಡೆಯಲ್ಲಿದ್ದನು (ಯೋಹಾನ 13:23) ಯೂದನು ಬಹುಶಃ ಎಡಗಡೆ ಇದ್ದನು,[45] ಮತ್ತು ಉಳಿದ ಶಿಷ್ಯರು ಅಲ್ಲಿ ಇಲ್ಲಿ ಮೇಜಿನ ಸುತ್ತಲೂ ಹರಡಿಕೊಂಡಿದ್ದರು. ಆತನ ಕಣ್ಣುಗಳು ಪ್ರೀತಿಯಿಂದ ಹೊಳೆಯುತ್ತಿದ್ದವು (ನೋಡಿರಿ ಯೋಹಾನ 13:1, 34). ಆತನು, "ನಾನು ಶ್ರಮೆ ಅನುಭವಿಸುವುದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವುದಕ್ಕೆ ಅಪೇಕ್ಷಿಸುತ್ತಿದ್ದೇನೆ,[46] ನಾನು ನಿಮಗೆ ಹೇಳುತ್ತೇನೆ, ಇದ ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವುದೇ ಇಲ್ಲ" ಎಂದು ಹೇಳಿದನು (ಲೂಕ 22:15, 16).

ಪಸ್ಕವು "ದೇವರ ರಾಜ್ಯದಲ್ಲಿ ನೆರವೇರುವ ತನಕ" ಎಂದು ಯೇಸು ಹೇಳಿದುದರ ಅರ್ಥವೇನು? ಪಸ್ಕವು ಅದು ಇರುವಂತೆಯೇ ಯೇಸುವಿನಲ್ಲಿನ ಬಲಿದಾನದ ಒಂದು ಮಾದರಿಯಾಗಿದೆ ಎಂದು ನಾವು ಸಾಮಾನ್ಯವಾಗಿ ಯೋಚಿಸು ವವರಾಗಿರುತ್ತೇನೆ (1 ಕೊರಿಂಥ 5:7; ನೋಡಿರಿ ಯೋಹಾನ 1:29, 36; 1 ಪೇತ್ರ 1:18, 19; ಇಬ್ರಿಯ 9:14; ಪ್ರಕಟನೆ 5:6, 12). ಪಸ್ಕವು "ದೇವರ ರಾಜ್ಯದಲ್ಲಿ ನೆರವೇರುವ ತನಕ" ಎಂದು ಕರ್ತನು ಸೇರಿಸಿದ್ದಾನೆ. ಪಸ್ಕವು ಕೇವಲ ಅವರ ಹಿಂದಿನ ವಿಮೋಚನೆಯ ಸಂಸ್ಮರಣೆ ಆಗಿರಲ್ಲಿ, ಅದರಂತೆಯೇ ಮುಂದೆ ಭವಿಷ್ಯಲ್ಲಿಯೂ ಬಿಡುಗಡೆಯ ಖಚಿತೆಯೂ ಆಗಿದೆ ಎಂದು ಯೆಹೂದ್ಯರು ಯೋಚಿ ಸುವವರಾಗಿದ್ದರು. ಕ್ರಿಸ್ತನು ಆ ವಿಚಾರದ ಮೇಲೆಯೇ ಕಟ್ಟಿದ್ದು, ಆ ಬಿಡುಗಡೆಯು ಮೆಸ್ಸೀಯನ ರಾಜ್ಯದಲ್ಲಿ ಬರುವುದಾಗಿದೆ ಎಂದು ಸೂಚಿಸಿದನು.

ಆ ರಾಜ್ಯವು ಸಭೆಯಾಗಿದೆ (ಮತ್ತಾಯ 16:18, 19), ಕ್ರಿಸ್ತನ ರಕ್ತದಿಂದ ರಕ್ಷಿಸಲ್ಪಟ್ಟ ಜನರೇ ಆಗಿದ್ದಾರೆ (ಎಫೆಸ 1:22, 23; 2:16; 5:23, 25), ಯೆಹೂದಿಗಳ ಪಸ್ಕದ ಸಂಸ್ಮರಣೆಯೂ ಕೂಡಾ ಇಸ್ರಾಯೇಲರು ಐಗುಪ್ತದಿಂದ ಬಿಡುಗಡೆಹೊಂದಿದ್ದೇ ಆಗಿತ್ತು, ಹೀಗೆ ನಮ್ಮ ಪಸ್ಕದ ಕುರಿಯ ಮೂಲಕ, "ದೇವರು ನಮ್ಮನ್ನು ಅಂಧಕಾರದ ದೊರತನದಿಂದ ನಮ್ಮನ್ನು ಬಿಡಿಸಿ ತನ್ನ ಪ್ರಿಯಕುಮಾರನ ರಾಜ್ಯದೊಳಗೆ ಸೇರಿಸಿದನು" (ಕೊಲಸ್ಸೆ 1:13; KJV). ಪಸ್ಕವು ಸಭೆಯ "ಅಂತಿಮ ಪರಿಪೂರ್ಣತೆಯು ... ದೇವರ ರಾಜ್ಯದಲ್ಲಿದೆ."[47]

ಇದು ದೇವರ ರಾಜ್ಯದಲ್ಲಿ ಪರಿಪೂರ್ಣವಾದ ನಂತರ ತನು ಪಸ್ಕದ ಊಟಮಾಡುವುದಾಗಿದೆ

ಯೇಸು ಹೇಳಿದನು. "ಊಟಮಾಡುವದು" ಇದು "ಪಾಲ್ಗೊಳ್ಳುವುದಕ್ಕಾಗಿ" ಅಥವಾ "ಬಾಗಿಯಾಗುವುದಕ್ಕಾಗಿ" ಬಳಸುವ ರೂಪಕವಾಗಿದೆ. ಯೆಹೂದಿಗಳ ಯೋಚನೆಯಂತೆ, ಮೆಸ್ಸಿಯನ ಬರೋಣವು ಮತ್ತು ಆತನ ರಾಜ್ಯವು ಔತಣದ ಮನೆಯಲ್ಲಿ ಆಚರಿಸುವದು ಆಗಿತ್ತು (ಯೆಶಾಯ 25:6-8; ನೋಡಿರಿ ಲೂಕ 13:29; 22:30). ಈ ರಾಜ್ಯವು ಭೌತಿಕವಾಗಿಲ್ಲದಿದ್ದರಿಂದ (ಯೋಹಾನ 18:36), ಔತಣವೂ ಇಲ್ಲವಾಗಿದೆ. ಪರಲೋಕ ದಲ್ಲಿ ಮೆಸ್ಸೀಯನ ಔತಣದ ನಿರೀಕ್ಷೆಯು ಅಂತಿಮ ಪರಿಪೂರ್ಣತೆಯಾಗಿದೆ (ಪ್ರಕಟಣೆ 19:7-9); ಆದರೆ ಈ ಜೀವಿತದಲ್ಲಿಯೂ ಕೂಡಾ, ಆತ್ಮೀಕ ಔತಣವನ್ನು ರಾಜ್ಯದಲ್ಲಿ/ಸಭೆಯಲ್ಲಿ ನಾವು ಆನಂದಿಸುತ್ತಿದ್ದೇವೆ. ಕ್ರಿಸ್ತನು ನಮ್ಮ ಆತ್ಮೀಕ ಆಶೀರ್ವಾದದ ಔತಣದಲ್ಲಿ ಕಾಣದ ಪಾಲುದಾರನಾಗಿರುತ್ತಾನೆ (ಎಫೆಸ 1:3; ಪ್ರಕಟನೆ 3:20; ಮತ್ತಾಯ 18:20).

ಹಬ್ಬದ ಆರಂಭದ ಹತ್ತಿರದಲ್ಲಿ, ಯೇಸು ಒಂದು ಬಟ್ಟಲು ದ್ರಾಕ್ಷಾರಸವನ್ನು ತೆಗೆದುಕೊಂಡನು, ದೇವರಿಗೆ ಸ್ತೋತ್ರ ಹೇಳಿದನು ಮತ್ತು ಹನ್ನೆರಡು ಜನರಿಗೆ: "ಇದನ್ನ ನಿಮ್ಮೊಳಗೆ ಹಂಚಿಕೊಳ್ಳಿರಿ" ಎಂದು ಹೇಳಿದನು (ಲೂಕ 22:17). ಇದು ಕರ್ತನ ಭೋಜನ ದಲ್ಲಿ ಸ್ಥಾಪಿಸಲು ಬಳಸುವ ಬಟ್ಟು ಅಲ್ಲ; ಅದು ಊಟದ ನಂತರ ಬರುವುದಾಗಿದೆ (ನೋಡಿರಿ ಲೂಕ 22:20). ಇದು ಪಸ್ಕದ ಆಚರಣೆಯಲ್ಲಿ ಉಪಯೋಗಿಸುವ ಹಲವು ಬಟ್ಟಲುಗಳಲ್ಲಿ ಇದು ಮೊದಲನೆಯದ್ದಾಗಿದೆ. ಕ್ರಿಸ್ತನು ಹಂದೆ ಹೇಳಿದ ವಿಚಾರವನ್ನೇ ಪುನರಾವರ್ತಿಸಿದನು: "ಇಂದಿನಿಂದ ದೇವರ ರಾಜ್ಯವ ಬರುವ ತನಕ ನಾನು ದ್ರಾಕ್ಷಾರಸವನ್ನು ಕುಡಿಯುವದೇ ಇಲ್ಲ" (ಲೂಕ 22:18). ರಾಜ್ಯ/ಸಭೆಯು ಕ್ರಿಸ್ತನ ಮರಣ, ಹೂಣುವಿಕೆ ಮತ್ತು ಪುನರುತ್ಥಾನದ ನಂತರದ ಮೊದಲ ಪಂಚಾಶತ್ತನದಿನದಂದು ಬರುವುದಾಗಿದೆ. ಈಗಾಗಲೇ ಗಮನಿಸಿದಂತೆ, ಕರ್ತನ ಮಾತುಗಳು ನಾವು ಆನಂದಿಸುವ ಆತ್ಮೀಕ ಹಬ್ಬದಲ್ಲಿ ಆತನ ಪಾಲ್ಗೊಳ್ಳುವಿಕೆಯ ಸಾಮಾನ್ಯವಾದ ಅನ್ವಯದ ಕರ್ತನ ಮಾತುಗಳು ಆಗಿವೆ. ಹೇಗೋ, ನಾವು ಮುಂದಿನ ಪಾಠದಲ್ಲಿ ನಾವು ನೋಡುವಂತೆ, ಯೇಸುವಿನ ಮಾತುಗಳು ಕರ್ತನ ಭೋಜನದಲ್ಲಿ ನಮ್ಮ ಪಾಲ್ಗೊಳ್ಳುವಿಕೆಯ ಪ್ರಕಾರ ವಿಶೇಷ ಅನ್ವಯವಾಗಿದೆ.

## ಪಸ್ಕವು ಅಡ್ಡಿಪಡಿಸಲ್ಪಟ್ಟದ್ದು (ಲೂಕ 22:24-30)

ಹಬ್ಬವು ಶಾಂತಿಯ ಮತ್ತು ಪ್ರೀತಿಯ ವಾತಾವರಣವನ್ನು ಆರಂಭಿಸಿತು, ಆರೆ ಅದು ಆ ಶಿಷ್ಯನಿಗೆ ಬಲು ಮಹತ್ವವಾದದ್ದು ಹಳೆಯದನ್ನು ಪ್ರಶ್ನಿಸುವ ಸ್ವಭಾವಕ್ಕೆ ಸಂಬಂಧಿಸಿದಂತದ್ದು ನವೀಕರಿಸಲ್ಪಟ್ಟು ಬೇಗನೇ ಭರ್ಜರಿತವಾಯಿತು (ವಚನ 24; ನೋಡಿರಿ ಮಾರ್ಕ 9:34; ಲೂಕ 9:46).[48] ಬಹುಶಃ ಪ್ರಚೋದಕವಾದ ಆ ವಾದವು ರಾಜ್ಯವನ್ನು ಸೂಚಿಸುವುದು ಆಗಿರಬೇಕು. ಆಸನದ ವ್ಯವಸ್ಥೆಯಿಂದಲೂ ಈ ಕಿಡಿಹೊತ್ತಿರಬಹುದು. ಕಾರಣಗಳು ಏನೇ ಇರಲಿ, ಅಪ್ರಬುದ್ಧತೆ, ಸ್ವಾರ್ಥತೆ, ಮತ್ತು ಅಸಮಂಜವಾದ ಈ ಕೆಲಸ ಯೇಸುವಿನ ಹೃದಯವನ್ನು ಒಡೆದಿರಬಹುದು. ತಿರುಗಿ ಎಂದಿನ ಬಲು ತಾಳ್ಮೆಯಿಂದ, ಆತನ ರಾಜ್ಯವು ಸೇವೆಯ ಶ್ರೇಷ್ಟತೆಯು ಮೇಲಿದೆ ಹೊರತು ಸ್ಥಾನದ ಮೇಲಿಲ್ಲ ಎಂದು ತನ್ನ ಹಿಂಬಾಲಕರಿಗೆ ನೆನಪಿಸುವವನಾಗಿದ್ದನು (ಲೂಕ 22:25-27; ನೋಡಿರಿ ಮತ್ತಾಯ 18:1-5; 20:25-28; 23:10-12).

ಆತನಲ್ಲಿನ ಅವರ ನಂಬಿಕೆಯು ಮರೆಯಲಾಗದ್ದು ಎಂದು ಅವರಿಗೆ ಆಶ್ವಾಸನೆ ಕೊಟ್ಟನು. ಆತನು ಅನುಭವಿಸಿದ ಕಷ್ಟಗಳಲ್ಲಿ ಅವನೊಡನೆ ನಿಂತುಕೊಳ್ಳುವ ಮೂಲಕ ಅವರು ಬಹುಮಾನವನ್ನು ಹೊಂದಿದರು (ಲೂಕ 22:28). ಅವರು ಆತನ ರಾಜ್ಯದ/ಸಭೆಯ ಪ್ರಮುಖಭಾಗವಾಗಿದ್ದಾರೆ (ವಚನ 29; ನೋಡಿರಿ 1 ಕೊರಿಂಥ 12:28) ಮತ್ತು ಆತನೊಡನೆಯ ಹತ್ತಿರದಿಂದ, ವೈಯಕ್ತಿಕ ಸಂಬಂಧದಿಂದ ಆನಂದಿಸುವುದನ್ನು ಮುಂದುವರೆಸುವರು (ಲೂಕ 22:30). ಅವರು ಆತನೊಡನೆ ಆಳುವವರೂ ಆಗಿದ್ದಾರೆ (ವಚನ 30).[49]

## ಮುಕ್ತಾಯ

ಯೇಸು ಕೇವಲ ತನ್ನ ಶಿಷ್ಯರಿಗೆ ಸೇವೆಮಾಡಲು *ಹೇಳಲಿಲ್ಲ*; ಅವರ ಪಾದಗಳನ್ನು ತೊಳೆಯುವ ಮೂಲಕ ಆತನು ಆ ಸೇವೆಯನ್ನು ನಮ್ರವಾಗಿ ಪ್ರಾಯೋಗಿಸಿದನು (ಯೋಹಾನ 13:2-20). ನಮ್ಮ ಮುಂದಿನ ಪಾಠದಲ್ಲಿ, ಕೊನೆಯ ಭೋಜನದ ಘಟನೆಯ ಬಗೆಗೆ ಮತ್ತು ಇತರ ಸಂಗತಿಗಳ ಬಗೆಗೆ ನಾವು ಅಭ್ಯಾಸಿಸೋಣ. ಕರ್ತನ ಭೋಜನದ ಸಂಸ್ಥಾಪಿಸುವಿಕೆಯು ಒಂದು ಉಚ್ಚವಾದ ದೃಷ್ಟಾಂತವಾಗಿದೆ.

ನಾವು ಮುಗಿಸುತ್ತಿದ್ದಂತೆಯೇ, ಸಿದ್ಧತೆಯನ್ನು ಮಾಡುವ ವಿಷಯದತ್ತ ಮರಳೋಣ. ಕರ್ತನು ಒಂದು ದಿನ ಬರುತ್ತಾನೆ. ಇದು ಇಂದೇ ಆಗಿರಬಹುದು (ಮತ್ತಾಯ 24:36, 42-44) ನೀವು ಸಿದ್ಧರಾಗಿದ್ದೀರಾ?

---

ಟಿಪ್ಪಣಿಗಳು

[1]"ಕಡೆಯ ಭೋಜನ" ಪಸ್ಕದ ಹಬ್ಬಕ್ಕೆ ಮತ್ತು ಮೇಲುಪ್ಪರಿಗೆಯಲ್ಲಿ ಅದಕ್ಕೆ ಸಂಬಂಧಿಸಿದಂತಹ ಘಟನೆಗಳಿಗೆ ಸಂಪ್ರದಾಯಿಕ ಹೆಸರಾಗಿದೆ. ಯೇಸು ತಾನು ಶಿಲುಬೆಗೇರಿಸಲ್ಪಡುವ ಮುಂಚೆ ಶಿಷ್ಯರೊಂದಿಗೆ ಮಾಡಿದ ಕೊನೆಯ ಭೋಜನವಾಗಿದೆ. [2]ಮಹಾಸಭೆಯು ಆತನನ್ನು ಕೊಲ್ಲಲು "ಸಿದ್ಧವಾಗಿರುವುದನ್ನು" ನಾವು ನೋಡುತ್ತೇವೆ. [3]Quoted in Bartlett's *Familiar Quotations, Expanded Multimedia Edition* (Time Warner Electronic Publishing, 1995) ರಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಸೋಪನು ಗ್ರೀಕ್ ಜನಪದ ನಾಯಕನಾಗಿದ್ದು ಆರನೆಯ ಶತಮಾನದಲ್ಲಿ ಜೀವಿಸಿದ್ದನು ಎಂದು ಭಾವಿಸಲಾಗಿದೆ. ಆತನು ಅನೇಕ ಪ್ರಾಣಿಗಳ ಕಥೆಗಳಿಗೆ ಬಾಧ್ಯನಾಗಿದ್ದಾನೆ. [4]ಹಿಂದೆ ಸೂಚಿಸಿದಂತೆ *parousia* ಇದು ಯೇಸುವಿನಎರಡನೆಯ ಬರೋಣದ ಬಗ್ಗೆ ಇರುವ ಸಾಮಾನ್ಯವಾಗಿ ಬಳಸುವ ಗ್ರೀಕ್‌ಪದವಾಗಿದೆ. [5]ಈ ಸಾಮ್ಯದಲ್ಲಿರುವ "ಕನ್ನಿಕೆಯರು" ಎಂಬುದು ತರುಣಿಯರನ್ನು ಅವಿವಾಹಿತ ಸ್ತ್ರೀಯರನ್ನು ಸೂಚಿಸುವುದಾಗಿದೆ. RSVಯಲ್ಲಿ "ಕನ್ಯೆ" ಎಂದಿದೆ. NRSV ಯಲ್ಲಿ "ವಧು" ಎಂದಿದೆ. ಆ ದಿನಗಳಲ್ಲಿ, ತರುಣರಾಗಿದ್ದು ಅವಿವಾಹಿತರಾದ ಯೆಹೂದಿ ಸ್ತ್ರೀಯರು ಮೂಲತಃವಾಗಿ ಕನ್ಯೆಯರಿಗೆ ಸಮಾನವಾಗಿದ್ದು "maidens" ಎಂದಿದೆ. [6]ಕನ್ಯೆಯರು ಮದಲಿಂಗನಿಗಾಗಿ ವಧುವಿನ ಮನೆಯಲ್ಲಿ ಕಾಯುತ್ತಿದ್ದರು, ಆದರೆ ಅವರು ಮದಲಿಂಗನಿಗಾಗಿ ಮನೆಯಲ್ಲಿ ಮದಲಿಂಗನಿಗಾಗಿ ಆತನು ತನ್ನ ವಧುವಿನೊಡನೆ ಮರಳಿಬರುವುದನ್ನು ಕಾಯುತ್ತಿದ್ದರು ಎಂದೆನ್ನಿಸುತ್ತದೆ. [7]ಆ ದಿನಗಳಲ್ಲಿ ಉಪಯೋಗಿಸಲ್ಪಡುತ್ತಿದ್ದಂತ ದೀಪದ ಬತ್ತಿಯೊಡನೆ ಇರುವ ಸಣ್ಣಪಾತ್ರೆಗಳು ಆಗಿರಬಹುದು (ಮತ್ತಾಯ 5:15ನ್ನು ನೋಡಿರಿ), ಹೇಗೂ ಮೆರವಣಿಗೆಯ ದಾರಿಗೆ ಬೆಳಕನ್ನು ಕೊಡಲು ಟಾರ್ಚುಗಳು ಯೋಗ್ಯವಾದವು ಎಂಬುದು ಯೇಸುವಿನ ಮನದಲ್ಲಿ ಇದ್ದಿರಬಹುದು ಎಂದು ಕೆಲವರು ಯೋಚಿಸುತ್ತಾರೆ. (USನಲ್ಲಿ "ಟಾರ್ಚ್" ಎಂದರೆ ಕಟ್ಟಿಗೆಯ ಕೊನೆಯಲ್ಲಿ ಉರಿಯುವ ಚಿಂದಿಬಟ್ಟೆ ಇರುವುದಾಗಿತ್ತು ಹೊರತು ಹೊಳೆಯುವ ಬೆಳಕಲ್ಲ.) [8]ಒಬ್ಬ ಬೋಧಕರು "ಐವರು ಜಾಣರು ಮತ್ತೈವರು ಬುದ್ಧಿ ಇಲ್ಲದವರು" ಎಂದು ಹೇಳಿದರು. [9]ಮತ್ತಾಯ 25:12ರಲ್ಲಿ, ಬಳಸಲಾದ "ತಿಳಿ" ಎಂಬ ಪದವು (ಇದು ಬೈಬಲಿನಲ್ಲಿ ಹಲವು ಬಾರಿ ಇರುವಂತೆ) "ಅನುಕೂಲಕವಾದ ಜ್ಞಾನ" ಎಂಬ ಅರ್ಥದಲ್ಲಿ ಇರುವುದಾಗಿದೆ. ಅವರು ಯಾರು ಎಂದು ಬೋಧಕನು ತಿಳಿದಿದ್ದನು, ಆದರೆ ಆಚರಣೆಯ ಅವರ ಸರಿಯಾದ ಭಾಗ ಯಾವುದಾಗಿತ್ತು ಎಂಬುದನ್ನು ಆತನು ಗುರುತಿಸಿರಲಿಲ್ಲ (ಮತ್ತಾಯ 7:23 ರೊಂದಿಗೆ ಹೋಲಿಸಿರಿ). [10]*ಕ್ರಿಸ್ತನ ಜೀವನ ಚರಿತ್ರೆ, 5ರಲ್ಲಿ* ಪುಸ್ತಕದಲ್ಲಿರು "ಮರಣವು ಕೈಯಲ್ಲಿದ್ದಾಗ" ಎಂಬ ಪಾಠವನ್ನು ನೋಡಿರಿ.

[11]ಈ ಸಾಮ್ಯದ ವಿವರವಾದ ಅಧ್ಯಯನಕ್ಕಾಗಿ ಮುಂದಿನ ಪ್ರಸಂಗವಾದ "ಕರ್ತನಿಗಾಗಿ ಎಲ್ಲಾ ಅಪಾಯವನ್ನೂ ಎದುರಿಸುವುದು" ಎಂಬುದನ್ನು ನೋಡಿರಿ. [12]ಅಲ್ಲಿ ಬಹುಮುಖವಾದ ನ್ಯಾಯತೀರ್ಪು ಇದೆ ಎಂದೂ ಮತ್ತಾಯ 25:31-46 ಸೂಚಿಸುವಂತೆ "ರಾಜ್ಯಗಳ ನ್ಯಾಯತೀರ್ಪು" ಎಂಬುದನ್ನು ಇತರ ನ್ಯಾಯತೀರ್ಪಿನೊಡನೆ ಹೋಲಿಸಿ ಕೆಲವರು ಬೋಧಿ ಸುವವರಾಗಿದ್ದಾರೆ, ಆದರೆ ಅಲ್ಲಿ ನ್ಯಾಯತೀರ್ಪಿಗೆ ಒಂದೇ ಒಂದು ದಿನ ಇದೆ ಎಂದು ಬೈಬಲ್ ಬೋಧಿಸುವುದಾಗಿದೆ (ನೋಡಿರಿ ಇಬ್ರಿಯ 9:27). [13]ಈ ಪರಿಚ್ಛೇದದಲ್ಲಿ "ಬೆತ್ತಲೆ" ಎಂದು ಬಳಸಲ್ಪಟ್ಟ ಪದವು ದೇವವಾಕ್ಯದಲ್ಲಿ ಹಲವು ಬಾರಿ ಹಾಕಿಕೊಳ್ಳಬೇಕಾದಷ್ಟು ಬಟ್ಟೆ ಇಲ್ಲದ್ದನ್ನು ಸೂಚಿಸುವುದಾಗಿದೆ. [14]ಸೆರೆಯಲ್ಲಿದ್ದವರು ಬಹುಶಃ ಅವರ

ನಂಬಿಕೆಯ ಕಾರಣದಿಂದಲೇ ಬಂಧಿತರಾಗಿರಬೇಕು. ನೀವು ನಿಮ್ಮ ಸಹೋದರನಿಗೆ ಸಹಾಯ ಮಾಡಲು ಅಥವಾ ಸರಿಯಾಗಿ ನಡೆಸಿಕೊಳ್ಳದಿದ್ದರೆ ನೀವು ಇಲ್ಲಿಯೇ ನಿಲ್ಲಿಸಿರಿ ಮತ್ತು ಇದನ್ನು ಗಮನಿಸಿರಿ ನೀವು ಸಹಾಯ ಮಾಡುವದು ಅಥವಾ ಕೆಟ್ಟದ್ದಾಗಿ ನಡೆಸಿಕೊಳ್ಳುತ್ತಿರುವುದು ಯೇಸುವಿಗೆ ನೆನಪಿಟ್ಟುಕೊಳ್ಳಿರಿ (ಮತ್ತಾಯ 25:40, 45; ನೋಡಿರಿ ಅಪೊಸ್ತಲರ ಕೃತ್ಯಗಳು 9:4). [15]ಅದೇ ಪದವು ಮತ್ತಾಯ 25:46ರಲ್ಲಿನ ("ನಿತ್ಯತ್ವ" ಅಥವಾ ಎಂದಿಗೂ "ಅಳಿಯದ" ಎಂಬುದಕ್ಕೆ ಇರುವ ಗ್ರೀಕ್ ಪದಗಳು) "ಶಿಕ್ಷೆ" ಮತ್ತು "ಜೀವಿತ" ಎರಡನ್ನೂ ವರ್ಣಿಸಲು ಬಳಸಲಾಗಿದೆ. ಶಿಕ್ಷೆಯು ಎಂದೆಂದಿಗೂ ಇರುವುದಾಗಿರದಿದ್ದರೆ, ನಂತರ ಅದು ಜೀವವು ಕೂಡಾ ಒಂದು ವೇಳೆ ಜೀವವು ನಿರಂತರವಾಗಿರುವುದಾಗಿದ್ದರೆ ಮರಣವೂ ಕೂಡಾ. [16]ಹಿಂದೆ ಸೂಚಿಸಿದಂತೆ, ಇದು ಬಲುಹಿಂದೆಯೇ ಆಗಿತ್ತು ಎಂದು ಯೋಹಾನನು ಸೂಚಿಸಿದ್ದಾಗ್ಯೂ ಕೆಲವು ಸಾಂಗತ್ಯಗಳನ್ನು ನಾವು ತೆಗೆದುಹಾಕಿದ್ದು ಕೆಲ ಘಟನೆಗಳನ್ನು ನಾವು ಮಂಗಳವಾರದಿಂದ ಬುಧವಾರ ಮುಂಜಾನೆಯಲ್ಲಿ ಇರಿಸಿದ್ದೇವೆ ಯೋಹಾನನು ಅದನ್ನು ಮುಂಚಿನ ದಿನದಲ್ಲಿ ಬರುತ್ತದೆಂದು ಸೂಚಿಸಿದ್ದಾಗ್ಯೂ (ಯೋಹಾನ 12:1, 2, 12) ಕೆಲವರು ಬೆಥಾನ್ಯದ ಊಟವನ್ನು (ಮರಿಯಳಿಂದ ಅಭೀಷೆಕಿಸಲ್ಪಡುವುದರ) ಬುಧವಾರಕ್ಕೆ ಇರಿಸಿದ್ದಾರೆ. [17]ನಂತರ ಆತನು ಗುರುವಾರ ಮುಂಜಾನೆಯಿಂದ ತನ್ನ ಮರಣದವರೆಗೆ 36 ತಾಸು ಆತನು ಮಲಗಲಿಲ್ಲ. [18]ಮಹಾ ಸಭೆಯ ಸದಸ್ಯರು ಕೆಲವರು ಯೇಸುವಿಗೆ (ನಿಕೊದೇಮನು ಮತ್ತು ಅರಿಮಥಾಯದ ಯೆಸೇಫ) ಒಲವಿದ್ದವರಾಗಿದ್ದು ಈ ಸಭೆಯಲ್ಲಿ ಅವರು ಕರೆಯಲ್ಪಟ್ಟಿರಲಿಲ್ಲ. [19]ಕಾಯಫನ ಮೇಲಿನ ಟಿಪ್ಪಣೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 9ನೇ* ಪುಸ್ತಕದಲ್ಲಿರುವ "ಅವಶ್ಯವಿರುವದು: ಹೊಂದಿಕೊಳ್ಳುವ ಭಾವನೆ" ಎಂಬ ಪಾಠವನ್ನು ನೋಡಿರಿ. [20]D. H. Wheaton, "Money," in *The Illustrated Bible Dictionary,* Part 2, ed. N. Hillyer (Downer's Grove, Ill.: InterVarsity Press, 1980), 1022.

[21]*ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿರುವ "ಶಿಷ್ಯತವ ಗುರುತುಗಳು" ಎಂಬ ಪಾಠವನ್ನು ನೋಡಿರಿ. [22]ಯೂದನು ಎಷ್ಟು ಹಣ ತೆಗೆದುಕೊಂಡಿರಬಹುದು ಎಂಬುದನ್ನು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಲು ಒಬ್ಬ ಸಾಮಾನ್ಯ ಕೆಲಸ ಮಾಡುವ ವ್ಯಕ್ತಿಯು ನಾಲ್ಕು ತಿಂಗಳಲ್ಲಿ ಎಷ್ಟು ಹಣ ಮಾಡಬಹುದೆಂದು ನೀವು ಲೆಕ್ಕಹಾಕಬಹುದು. [23]F. LaGard Smith, *The Narrated Bible in Chronological Order* (Eugene, Oreg.: Harvest House Publishers, 1984), 1453. ನೋಡಿ ವಿಮೋಚನಕಾಂಡ 21:32: ಇದು ಒಳ್ಳೆ ಸೇವಕನ ಕ್ರಯವಾಗಿದೆ. [24]ಯೂದನು ಕೇವಲ ಮೂವತ್ತು ಬೆಳ್ಳಿನಾಣ್ಯಗಳನ್ನು ಮಾತ್ರ ಪಡೆದನು ಎಂಬುದು ಇಲ್ಲಿ ನಮೂದಿಸಲ್ಪಟ್ಟಿದೆ (ನೋಡಿರಿ ಮತ್ತಾಯ 27:3, 5). [25]B. S. Dean, "An Outline of New Testament History," *Truth for Today* (March 1992): 25. [26]ಅಧಿಕಾರಿಗಳಿಗೆ ಯೇಸುವಿನ ಇರುವಿನ ಬಗೆಗೆ ತಿಳಿಸುವದು ಯಾದನ ವಿಚಾರ ಆಗಿತ್ತು ಎಂದು ಇದು ಸೂಚಿಸುವುದಾಗಿದೆ (ನೋಡಿರಿ ಯೋಹಾನ 11:57). ತನ್ನ ಮನಸಾಕ್ಷಿಗೆ ಮಸಿಹಚ್ಚಿಕೊಳ್ಳುವದಕ್ಕೆ ತಾನೇ ಕಾರಣಬಾದನು ಎಂಬ ಸಾಧ್ಯತೆಯು ಇದೆ, ಆದರೆ ಎಷ್ಟು? ಎಂಬುದು ಆತನ ಪ್ರಶ್ನೆಯು ನಾಗರೀಕ ಪ್ರಜ್ಞೆಯುಳ್ಳ ಪ್ರಜೆಗಳಿಗಲ್ಲ. [27]H. I. Hester, *The Heart of the New Testament* (Liberty, Mo.: Quality Press, 1963), 195. [28]ಉದಾಹಣೆಗೆ ಕೆಲವರು ಯೇಸು ಮುನ್ನುಗ್ಗುವುದಕ್ಕೆ ಆತನ ರಾಜ್ಯವನ್ನು ಸ್ಥಾಪಿಸುವುದಕ್ಕೆ (ಭೌತಿಕ ಮತ್ತು ರಾಜಕೀಯ) ಯೂದನು ಕೇವಲ ಯೇಸುವನ್ನು ನೂಕಲು ಒತ್ತಾಯಿಸುವವನು ಆಗಿದ್ದನು ಎಂದು ಹೇಳುವವರಾಗಿದ್ದಾರೆ. ಯೂದನು ಆತನ ಕಾರ್ಯಗಳ ಎಲ್ಲಾ ಪರಿಣಾಮಗಳನ್ನು ಮುನ್ನೊಡುವವನಾಗಿರಲಿಲ್ಲ (ಮತ್ತಾಯ 27:3-5). ಆದರೆ ಬೈಬಲ್ ಆತನ ಉದ್ದಾಮ ದ್ರೋಹಕ್ಕೆ ಪ್ರೇರಕವಾದ ಗುಣಗಳಿಂದ ಇಂದು ಇಲ್ಲಿರುವುದಾಗಿದೆ. [29]ಹಿಂದೆ ಯೇಸು ಆತನನ್ನು "ಸೈತಾನನೇ" ಎಂದು ಕರೆದಿದ್ದನು (ಯೋಹಾನ 6:70). [30]ಸೈತಾನನು ಹೃದಯಲ್ಲಿ ಬರುವದು ಮತ್ತು ಸುಳ್ಳಾಡವುದಕ್ಕೆ ಇನ್ನೊಂದು ಉದಾಹರಣೆಗಾಗಿ ಅಪೊಸ್ತಲರ ಕೃತ್ಯಗಳು 5:3, 4ನ್ನು ನೋಡಿರಿ.

[31]ನಾವು ನೋಡಿದಂತೆ, ಯೂದನು ಮತ್ತು ಇತರ ಅಪೊಸ್ತಲರು ಪಸ್ಕದ ಆಚರಣೆಗಾಗಿ ಮೇಲು ಪ್ಪರಿಗೆಯ ಮನೆಗೆ ಯೇಸುವಿನೊಡನೆ ಹೋದರು. [32]ಯೂದನ ಬದಲಾಗದ ಕಾಣಿಸಿಕೊಳ್ಳುವಿಕೆಯು ಆನಂತರದ ಘಟನೆಗಳಲ್ಲಿ ಸೂಚಿಸಲ್ಪಟ್ಟಿದೆ. ಯೂದನೇ ಮಾಡಿದ್ದಾನೆ ಎಂದು ಯೇಸು ಬಲ್ಲವನಾಗಿದ್ದನು ಆದರೆ ಇತರ ಶಿಷ್ಯರಿಗೆ ಇದರ ಬಗ್ಗೆ ಯಾವುದೇ ಸಂಶಯವಿರಲಿಲ್ಲ. [33]Quoted in B. S. Dean, "An Outline of New Testament History," *Truth for Today* (March 1992): 25. [34]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 644. [35]ಪಸ್ಕದ ಹಬ್ಬಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳು ಈಗಾಗಲೇ ಮನೆಯ ಯಜಮಾನನಿಂದ ಖರೀದಿ ಸಲ್ಪಟ್ಟಿರುವ ಸಾಧ್ಯತೆಯು ಇದೆ.

[36]*Mishnah* ನಲ್ಲಿ ಸ್ಪಷ್ಟಪಡಿಸಲಾದಂತೆ ಕುರಿಯು ಮೂರು ದಿನಗಳಿಂದ ಮುಂಚೆಯೇ ಒದಗುವದು ಎಂಬ ಸಾಧ್ಯತೆಯು ಇದೆ (ಕೀರ್ತನೆ 9:5). [37]ವಿವರಣೆಯು ಶಿಲುಬೆಯ ಮೇಲೆ ಯೇಸುವಿನ ಯಾವೊಂದು ಎಲುಬೂ ಮುರಿಯಬಾರದು ಎಂಬ ವಾಸ್ತವಕ್ಕೆ ಹೊಂದಿಕೊಂಡಿದ್ದಾಗಿದೆ (ಯೋಹಾನ 19:31-36). [38]ಯೇಸುವಿನ ದಿನದಲ್ಲಿನ ಪಸ್ಕಕ್ಕೆ ಸಂಬಂಧಿಸಿದಂತಹ ಮಾಹಿತಿಯು ಹಳೆಯ ಮತ್ತು ಹೊಸ ಒಡಂಬಡಿಕೆ ಆಧಾರದಿಂದ ಬಂದವುಗಳು ಆಗಿದ್ದು, ಆ ಸಮಯದಲ್ಲಿ ಕಾದಿಡಲ್ಪಟ್ಟ ಸಮಾಕಾಲೀನ ಯೆಹೂದಿ ಬೋಧನೆಗಳು ಮತ್ತು ಜೋಸ್ಪಸ್‌ನ ಬರಹಗಳು ಆಗಿವೆ. ಈ ಹಬ್ಬದಲ್ಲಿ ಬಳಸಿದ ಈ ಸಂಗತಿಗಳು ನಲ್ಲಿ ವರ್ಣಿಸಲ್ಪಟ್ಟವುಗಳು ಆಗಿವೆ (ಕೀರ್ತನೆ 10:1, 3-5). [39]Alfred Edersheim, *The Life and Times of Jesus the Messiah,* New Updated Version (Peabody, Mass.: Hendrickson Publishers, 1993), 809, 817. ಇತರ ಲೇಖಕರು ಈ ಅಂಶವನ್ನು ಮೂರು ಅಥಾ ಐದು ಬಟ್ಟಲುಗಳಿಗೆ ಇಡುವವರಾಗಿದ್ದಾರೆ. [40]ಬ್ರೆಡ್‌ನ ತುಂಡನ್ನು ಹರಿದು, ಪೇಸ್ಟೀಯಲ್ಲಿ ಅದ್ದಿ, ಮತ್ತು ನಂತರ ಬಾಯಲ್ಲಿ ಇಟ್ಟುಕೊಳ್ಳುತ್ತಿದ್ದರು. ಇದು ಯೋಹಾನ 13:26ರಲ್ಲಿ ಸೂಚಿಸಲಾದ ಆಹಾರವಾಗಿರಬಹುದು ಅಥವಾ ಇಲ್ಲದಿರಬಹುದು.

[41]Edersheim, 809, n. 19. [42]Marvin R. Wilson, "Passover," *International Standard Bible Encyclopedia,* gen. ed. James Orr (Grand Rapids, Mich.: Wm. B. Eerdmans Publishing Co., 1939), 3:677. ಬಬುಲೋನಿನ ತಾಲ್ಮಂಡಿನ ಉಪದೇಶವಾಗಿದೆ (ಕೀರ್ತನೆ 64). [43]ಯಾವುದೇ ಊಟದ ಸಾಮಗ್ರಿಗಳು (ಚಾಕು, ಚಮಚ, ಮತ್ತು ಫೋರ್ಕಗಳು) ಊಟದ ಸಮಯದಲ್ಲಿ ಬಳಸಲ್ಪಡುತ್ತಿರಲಿಲ್ಲ. [44]ಪ್ರಸಿದ್ಧ ಚಿತ್ರಕಾರ ಲಿಯೋನಾರ್ಡೊ ಡಾ ವಿಂಚಿಯ "ಕೊನೆಯ ಭೋಜನ" (1495-98) ಚಿತ್ರಪಟವು ಆತನ ದಿನದಲ್ಲಿಯ ಇಟಲಿಯಲ್ಲಿ ಇದ್ದ ಊಟದ ವ್ಯವಸ್ಥೆಯ ಚಿತ್ರಣ ಚಿತ್ರಿಸಲ್ಪಟ್ಟಿದೆಯೇ ಹೊರತು, ಆ ದಿನಗಳಲ್ಲಿ ಪಾಲೇಸ್ತೀನಿನಲ್ಲಿ ಕ್ರಿಸ್ತನು ಜೀವಿಸಿದ್ದಾಗಿನ ದಿನದಲ್ಲಿ ಇದ್ದುದ್ದ ಅಲ್ಲ. [45]ಯೇಸು ಬಹುಶಃ ಅದರೊಡನೆ ಅದ್ದಿಬಹುದು ಮತ್ತು ಕೈಯಲ್ಲಿ ತುತ್ತನ್ನು ಹಿಡಿದು ತನ್ನ ಹತ್ತಿರದಲ್ಲಿ ಒರಗಿರುವವರಿಗೆ ಕೊಟ್ಟಿರಬಹುದು (ಮತ್ತಾಯ 26:23; ಯೋಹಾನ 13:26). [46]ವಾಸ್ತವವನ್ನು ಯೇಸು ಸೂಚಿಸಿದ್ದಾಗಲೂ ಕೂಡಾ ಆತನು ಶಿಷ್ಯರ ಜೊತೆ ಪಸ್ಕದ ಊಟವನ್ನು ಮಾಡಿದನು (ಇದನ್ನು ಸಹ ನೋಡಿರಿ ಮತ್ತಾಯ 26:18; ಮಾರ್ಕ 14:14; ಲೂಕ 22:11), ಇದು ಪಸ್ಕದ ಹಬ್ಬವಾಗಿರಲಿಲ್ಲ, ಆದರೆ ರಾತ್ರಿಗಿಂತ ಮೊದಲು ಮಾಡುವ ಊಟವಾಗಿತ್ತು ಎಂದು ಕೆಲವರು ಸೂಚಿಸುವವರಾಗಿರುತ್ತಾರೆ. ಇದಕ್ಕೆ ಆಧಾರವಾಗಿ ಉಪಯೋಗಿಸುವ ಪರಿಚ್ಛೇದವು ಯೋಹಾನ 13:1, ಆಗಿದ್ದು ಭೋಜನದ ಸಮಯದಲ್ಲಿ ಇದನ್ನು ಆಧರಿಸಲು ಅವರು ಹೇಳುತ್ತಾರೆ. ಹಾಗೂ, ಪಸ್ಕದ ಊಟದ ಬಗೆಗೆ ವಚನ 2ರಲ್ಲಿ ತಾನೇ ಮಾತನಾಡುವಾಗ, ಯೋಹಾನ 13:1 ಪಸ್ಕದ ಮುಂದಿನ ತಕ್ಷಣದ ಅವಧಿಯನ್ನು ಸೂಚಿಸುವಂತೆ ಕಾಣುತ್ತಿದ್ದು, ಎಲ್ಲಾ ಪ್ರಸ್ತುತ ಪರಿಚ್ಛೆದಗಳು ಪರಿಗಣಿಸಲ್ಪಡುವವು ಆಗಿವೆ. [47]Richard Rogers, *The Life of Christ and His Teaching* (Lubbock, Tex.: Sunset International Bible Institute External Studies Department, 1995), 84. [48]ಲೂಕನು ಆ ವಿವಾದದವನ್ನು ಸಂಜೆಯ ಸಮಯಕ್ಕೆ ಸೇರಿಸಿದ್ದಾನೆ. ನಮ್ಮ ಮುಂದಿನ ಪಾಠವು ಪ್ರಾರಂಭದಲ್ಲಿ ಪಾದಗಳನ್ನು ತೊಳೆದ ಘಟನೆಯನ್ನು ನಾನು ಇದನ್ನು ಅದೇ ಸ್ಥಳದಲ್ಲಿ ಸ್ವಾಭಾವಿಕವಾಗಿ ಇರಿಸುವವನಾಗಿದ್ದೇನೆ. ಕಡೆಯ ಭೋಜನದ ಬಗೆಗಿನ ಕೆಲ ಕಾಲಾನುಕ್ರಮಗಳ ಸವಾಲುಗಳು ಈ ಪಾಠದಲ್ಲಿ ಚರ್ಚಿಸಲ್ಪಟ್ಟಿವೆ (ವಿಶೇಷವಾಗಿ ಅಡಿನುಡಿಗಳಲ್ಲಿ). [49]ಇಸ್ರಾಯೇಲರಿಗೆ ತೀರ್ಪುಮಾಡುವಾಗ ಅವರು ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊ ಳ್ಳುವಿರಿ ಎಂದು ಯೇಸು ಅವರಿಗೆ ವಾಗ್ದಾನಮಾಡಿದ್ದನು (ಮತ್ತಾಯ 19:28).